
ಬೇಂದ್ರೆ
ನಾಟಕ



ಅಂಬಿಕಾತನಯದತ್ತರ
ಹಳೆಯ ಗೆಳೆಯರು

ಸಂಪಾದಕರು:
ಡಾ|| ವಾಮನ ಬೇಂದ್ರೆ

ವಿಶ್ವ ಶ್ರಮ ಚೇತನ ಆವರಣದಲ್ಲಿ ಅರಳಿದ ಬೇಂದ್ರೆ ಸಪ್ತ ಸ್ಮಾರಕಗಳು



ಬೇಂದ್ರೆ ಪುತ್ಥಳಿ

ಷಟ್ಕೋಣಾಕೃತಿಯ ಪೀಠದ ಮೇಲೆ ವಿರಾಜಿಸುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಪುತ್ಥಳಿಯು ಒಂದು ವಿಶೇಷ ಸೃಷ್ಠಿ. ಈ ಪೀಠದಲ್ಲಿ ಬೇಂದ್ರೆಯವರ ಆರು ಕಾವ್ಯ ನಾಮಗಳು, ಬೇಂದ್ರೆಯವರು ತಮ್ಮನ್ನು ಕುರಿತು ರಚಿಸಿದ ಆರು ಕವನಗಳು ಹಾಗೂ ವಿಶ್ವಸಂದೇಶವಾಹಕ ಕವನಗಳು ಇವೆ.



ಬೇಂದ್ರೆ ಕಂಡ ಬೆನಕ

ಇದು ಒಂದು ವಿನೂತನ ಗಣಪತಿ ದೇವಾಲಯ. ಇಲ್ಲಿಯ ವೈಶಿಷ್ಠ್ಯ ವೆಂದರೆ ಬೇಂದ್ರೆಯವರು ಗಣಪತಿಯನ್ನು ಕುರಿತು ರಚಿಸಿದ ಹದಿನಾರು ಕವನಗಳನ್ನು ಕರಿಕಲ್ಲಿನಲ್ಲಿ ಕೆತ್ತಿಸಿ, ಇವುಗಳನ್ನೇಗುಡಿಯ ಮೈಯಾಗಿ ಬೆನಕಮಂದಿರವನ್ನು ನಿರ್ಮಿಸಲಾಗಿದೆ. ಬೇಂದ್ರೆ ಬೆನಕ ಸಾಹಿತ್ಯವನ್ನು ಅಮರಗೊಳಿಸುವ ಸ್ಮಾರಕ ಇದಾಗಿದೆ.



ಬೇಂದ್ರೆ ಸಂಶೋಧನ ಸಂಸ್ಥೆ

ಬೇಂದ್ರೆಯವರು ತಮ್ಮ ಜೀವಿತಕಾಲದಲ್ಲಿ ಅಧ್ಯಯನಮಾಡಿದ ಹಾಗೂ ಸಂಗ್ರಹಿಸಿದ 102 ವಿಷಯಗಳ ಕುರಿತಾದ 16,000 ಅಪೂರ್ವ-ಅಪರೂಪ ಗ್ರಂಥಗಳ ಅಮೂಲ್ಯ ನಿಧಿಯನ್ನು ಒಳಗೊಂಡಿದೆ. ಬೇಂದ್ರೆ ಸಾಹಿತ್ಯ ಪ್ರಕಾಶನ, ಸೈದ್ಧಾಂತಿಕ ಹಾಗೂ ವೈಜ್ಞಾನಿಕ ಸಂಶೋಧನೆಗೆ ಮೀಸಲಾದ ವಿಶಿಷ್ಠ ಸಂಸ್ಥೆ ಇದಾಗಿದೆ.



ಔದುಂಬರ ದತ್ತ-ಚೈತನ್ಯ

ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಸಮಗ್ರ ಜೀವನದ ಸಂಕೇತದ ಸ್ಮೃತಿಪೀಠ ಇದು. ಅತ್ತಿ ಹಣ್ಣು ಹೂವಾಗಿ ಹಣ್ಣಾಗುವದಿಲ್ಲ. ಹೂವಿನಲ್ಲಿಯೆ ಮಕರಂದವಿರುತ್ತದೆ.ಇದೇ ಔದುಂಬರ. ಔದುಂಬರ ಉಪಾಸಕ ದತ್ತ ಬೇಂದ್ರೆ ಅಂತೆಯೇ ಈ ಸ್ಮೃತಿಪೀಠಕ್ಕೆ ವಿಶೇಷಮಹತ್ವವಿದೆ. ಅತ್ತಿಹಣ್ಣಿನ ಬೃಹದಾಕಾರದ ಆಕೃತಿಯಲ್ಲಿ ಬೇಂದ್ರೆ ಪುತ್ಥಳಿಯನ್ನು ಕೂಡಿಸಿ, ಅದರ ಕೆಳಗೆ ಪುಟಿಯುವ ನಿರಂತರಕಾರಂಜಿ ಮನೋಜ್ಞವೂ-ಸಾಂಕೇತಿಕವೂ ಆಗಿದೆ. ಇದು ಬೇಂದ್ರೆ ಅಮರತ್ವದ ಕುರುಹು.



ಬೇಂದ್ರೆ ಕುಟೀರ

ಇದು ಬೇಂದ್ರೆ "ನಾಳಿನಾಳಿನಾ ಕನಸು". ಅಂತೆಯೇ ಬೇಂದ್ರೆ ಜನ್ಮ ಶತಮಾನೋತ್ಸವದ ಸ್ಮರಣೆಗಾಗಿ ಕರ್ನಾಟಕ ರಾಜ್ಯದ ಬಡದಿನಗೂಲಿ ನೌಕರರು ನಿರ್ಮಿಸಿದ ಪರ್ಣಕುಟೀರ ಇದು. ಬೇಂದ್ರೆ ಜೀವನ ಹಾಗೂ ಸಾಧನೆಗಳ ಭಾವಚಿತ್ರಗಳ ಪ್ರದರ್ಶನದ ಒಡಲಿನಲ್ಲಿ ಸಮಗ್ರ ಸಾಂಸ್ಕೃತಿಕ-ಶೈಕ್ಷಣಿಕ ಚಟುವಟಿಕೆಗಳ ಸಂಗಮದ ಕುಟೀರವಾಗಿ ಕಾರ್ಯತತ್ಪರವಾಗಿದೆ.



ಬೇಂದ್ರೆ ಭೂ-ವನ

2006 ರಲ್ಲಿ ಬೇಂದ್ರೆ ಸ್ಮರಣೆಗೆ ಅವರ ಜನ್ಮದಿನದಂದು ನಿರ್ಮಿಸಿದ ಬಯಲು ನಾಟ್ಯಗೃಹ ಇದು."ಬೇಂದ್ರೆ ನಾಟ್ಯಯೋಗ"ದ ಪ್ರಯೋಗಶಾಲೆಯಾಗಿ ಕಾರ್ಯಮಾಡಬೇಕೆಂಬ ಯೋಜನೆ "ಬೇಂದ್ರೆ ಭೂ-ವನ" ನಿರ್ಮಾಣದ ಉದ್ದೇಶ. " ಜೀವನ ಕೆಟ್ರೆ ನಾಟಕದಿಂದ ಸುಧಾರಿಸಬಹುದು,ಆದರೆ ನಾಟಕಾನೇ ಕೆಟ್ರೆ ?" ಇದು ಬೇಂದ್ರೆ ಕೊರಗಾಗಿತ್ತು. ಇದರ ನಿವಾರಣೆಯೇ "ಭೂ-ವನದ" ಮಹದೋದ್ದೇಶ.



ಬೇಂದ್ರೆ ಸಂಗೀತ ಅಕ್ಯಾಡೆಮಿ

ಬೇಂದ್ರೆ ಕಂಡ ಸಂಗೀತ ದರ್ಶನಕ್ಕೆ "ರವೀಂದ್ರ ಸಂಗೀತ"ದ ರೀತಿಯಲ್ಲಿ "ಬೇಂದ್ರೆ ಸಂಗೀತ"ದ ಹೊಸ ಪರಂಪರೆಯ ರೂಪಕೊಡುವ ಗುರಿ ಈ ಅಕ್ಯಾಡೆಮಿಯದಾಗಿದೆ. ಬೇಂದ್ರೆ ಕಾವ್ಯಕ್ಕೆ ಸಂಗೀತವನ್ನು ಅಳವಡಿಸಿ, ಪ್ರಕಟಿಸುವ ಕಾರ್ಯ, ಬೇಂದ್ರೆ ಸಂಗೀತ ಶಾಲೆಯನ್ನುನಡೆಸಿ, ಬೇಂದ್ರೆ ಸಂಗೀತಕ್ಕೆ ಮೀಸಲಾದ ಸಂಗೀತಜ್ಞರನ್ನು ತಯಾರಿಸುವದು ಮುಂತಾದ ಉದ್ದೇಶಗಳನ್ನು ಈ ಅಕ್ಯಾಡೆಮಿ ಹೊಂದಿದೆ.

ಬೇಂದ್ರೆ
ನಾಟ್ಯಯೋಗ

ಹಳೆಯ ಗೆಣೆಯರು

ಅಂಬಿಕಾತನಯದತ್ತರ ನಾಟ್ಯಯೋಗ

(ವರಕವಿ ಡಾ॥ ದ. ರಾ. ಬೇಂದ್ರೆ)

ಹಳೆಯ ಗೆಣೆಯರು

ನಾಟಕ

ಸಂಪಾದಕರು :

ಡಾ॥ ವಾಮನ ಬೇಂದ್ರೆ,

ಸಹ-ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ,

ಹುಬ್ಬಳ್ಳಿ

ಪ್ರಕಾಶಕರು :

ಡಾ॥ ಕೆ. ಎಸ್. ಶರ್ಮಾ,

ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ

ಶ್ರೀಮಾತಾ ಪ್ರಕಾಶನ,

ಅಂಬಿಕಾತನಯದತ್ತ ವೇದಿಕೆ,

"ವಿಶ್ವಶ್ರಮ ಚೇತನ", ಗೋಕುಲ ರಸ್ತೆ ಹುಬ್ಬಳ್ಳಿ - ೫೮೦ ೦೩೦.

ಕರ್ನಾಟಕ ರಾಜ್ಯ

ಹಳೆಯ ಗೆಣೆಯರು (ನಾಟಕ)

★

ಕವಿ : 'ಅಂಬಿಕಾತನಯದತ್ತ' (ವರಕವಿ ಡಾ|| ದ. ರಾ. ಬೇಂದ್ರೆ)

★

ಸಂಪಾದಕರು : ಡಾ|| ವಾಮನ ಬೇಂದ್ರೆ,
ಸಹ ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ ಹುಬ್ಬಳ್ಳಿ

★

ಪ್ರಕಾಶಕರು :
ಡಾ|| ಕೆ. ಎಸ್. ಶರ್ಮಾ,
ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ ಹುಬ್ಬಳ್ಳಿ
ಶ್ರೀಮಾತಾ ಪ್ರಕಾಶನ,
ಅಂಬಿಕಾತನಯದತ್ತ ವೇದಿಕೆ, 'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030.

★

★

ಬೆಲೆ : ರೂ.30-00

★

ಪರಿಷ್ಕೃತ ಮೊದಲ ಆವೃತ್ತಿ : 21-2-2008-ಡಾ|| ದ. ರಾ. ಬೇಂದ್ರೆಯವರ 112ನೆಯ ಜನ್ಮ ದಿನ.

★

ಹೊರಹೊದಿಕೆ ವಿನ್ಯಾಸ : ಶ್ರೀ ರವೀಂದ್ರ ಶಿರೋಳಕರ, ಧಾರವಾಡ

★

ಪುಟ ವಿನ್ಯಾಸ/ಡಿಟಿಪಿ : ಶ್ರೀ ಈರಣ್ಣ ನೂಲ್ವಿ, ಡಾ|| ಕೆ. ಎಸ್. ಶರ್ಮಾ ಐ.ಟಿ.ಸಿ., ಹುಬ್ಬಳ್ಳಿ

★

ಮುದ್ರಕರು : ಶರ್ಮಾ ಮುದ್ರಕರು, 4, ಪತ್ರಕರ್ತರ ಕಾಲನಿ, ಹುಬ್ಬಳ್ಳಿ - 580 032.

★

ಕೃತಿಗಳಿಗಾಗಿ ಬರೆಯಿರಿ :
ಶ್ರೀಮಾತಾ ಪ್ರಕಾಶನ,
'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030. ದೂರವಾಣಿ : (0836) 2330466.
ರವೀಂದ್ರ ಪುಸ್ತಕಾಲಯ,
ಚಾಮರಾಜಪೇಟೆ, ಸಾಗರ - 577 401, ಶಿವಮೊಗ್ಗ ಜಿಲ್ಲೆ ದೂರವಾಣಿ : 08183-228616 (ಕ).

ಸಾವಿರದ ನಮನ;
ಅಂತರಂಗದ ಆಶಯ

ಬೇಂದ್ರೆ ನಾಟಕಗಳನ್ನು ವಿವಿಧ ತಂತ್ರಗಳಿಂದ,
ವೈವಿಧ್ಯಪೂರ್ಣವಾಗಿ, ಪರಿಣಾಮಕಾರಿಯಾಗಿ ಪ್ರಯೋಗ ಮಾಡಿದ
ದಿಗ್ದರ್ಶಕರಿಗೆ, ನಟಿ-ನಟಿಯರಿಗೆ, ಗಾಯಕರಿಗೆ,
ಸಾಥ ನೀಡಿದವರಿಗೆ,
ವಿವಿಧ ರಂಗ ತಂತ್ರಜ್ಞರಿಗೆ,
ಈ ಪ್ರಯೋಗಗಳನ್ನು ಮೆಚ್ಚಿದ ರಸಿಕರಿಗೆ,
ರಸಾಸ್ವಾದ ಮಾಡಿದ ಸಮೀಕ್ಷಕರಿಗೆ
ನಮ್ಮ ಒಲವಿನ ಸಾವಿರದ ನಮನ.

'ಬೇಂದ್ರೆ ನಾಟ್ಯಯೋಗ'
ಕಲಂಕಿತ ಮನುಜರನ್ನು, ಕಲುಷಿತ ಸಮಾಜವನ್ನು
ಪರಿವರ್ತನೆಗೊಳಿಸಿ,
ನವಮಾನವ ಆವಿರ್ಭಾವಕ್ಕಾಗಿ ಮೀಸಲಾಗಲಿ ;
''ಬೇಂದ್ರೆ ರಂಗಭೂಮಿ''ಯು ಭವ್ಯಭವಿತವ್ಯದ ಬೆಳಕಾಗಲಿ ;
ಸರ್ವರ ಬಾಳನ್ನು ಬೆಳಗಲಿ.
ಇದು ನಮ್ಮ ಅಂತರಂಗದ ಆಶಯ.

ವಾಮನ
(ಸಂಪಾದಕ)

ಕುವಲಯಶ್ಯಾಮ
(ಪ್ರಕಾಶಕ)

ಕೃತಜ್ಞತಾರ್ಪಣೆ

ಈ ನಾಟಕವನ್ನು ಹೊರತರುವಲ್ಲಿ ನಮಗೆ ಪ್ರಾಂಜಲ ಮನಸ್ಸಿನಿಂದ ಸಹಾಯಮಾಡಿದ ''ಬೇಂದ್ರೆ ಅಭಿಮಾನಿ ಬಳಗ''ಕ್ಕೆ ನಮ್ಮ ಸಂಸ್ಥೆಯ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಕೃತಿಯ ಸಂಪಾದನೆ ಹಾಗೂ ಪಾಂಡಿತ್ಯಪೂರ್ಣ ಭೂಮಿಕೆ	: ಡಾ|| ವಾಮನ ಬೇಂದ್ರೆ, ಬೇಂದ್ರೆ ಸಂಶೋಧನ ಸಂಸ್ಥೆಯ ಸಹ ನಿರ್ದೇಶಕರು
ಡಿ. ಟಿ. ಪಿ. ಹಾಗೂ ಪುಟ ವಿನ್ಯಾಸ	: ಶ್ರೀ ಈರಣ್ಣ ನೂಲ್ವಿ
ಹೊರಹೊದಿಕೆ ವಿನ್ಯಾಸ	: ಶ್ರೀ ರವೀಂದ್ರ ಶಿರೋಳ್ಕರ್
ಮುದ್ರಣ ವಿನ್ಯಾಸ	: ಶ್ರೀ ಶಾಂತಕುಮಾರ

ರಸವಿಮರ್ಶೆಯನ್ನು ಒದಗಿಸಿದ ಎಲ್ಲ ವಿಮರ್ಶಕರಿಗೆ.

ಕನ್ನಡ ರಸಿಕರಿಗೊಂದು ಹೊಸ ರಸದೌತಣ-ಈ ನಾಟಕ. ಎಂದಿನಂತೆ ನಿಮ್ಮ ಬೆಂಬಲವೇ ನಮ್ಮ ಬಲ. ಆ ಬೆಂಬಲವನ್ನು ಈ ಪ್ರಕಟಣೆಗೂ ತೋರಿಸಬೇಕೆಂದು ಕೋರುತ್ತೇನೆ.

\- ಪ್ರಕಾಶಕ

ಪ್ರಕಾಶಕರ ಭೂಮಿಕೆ

ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ ಡಾ|| ದ. ರಾ. ಬೇಂದ್ರೆ ಸಂಶೋಧನ ಸಂಸ್ಥೆಯು ಬೇಂದ್ರೆ ಸಮಗ್ರ ಸಾಹಿತ್ಯ ಪ್ರಕಟಣೆಯ ಅಂಗವಾಗಿ ಅವರ ಎಲ್ಲ ಪ್ರಕಟಿತ, ಅಪ್ರಕಟಿತ ಹಾಗೂ ಅವರು ಕಲ್ಪಿಸಿದ್ದು, ಬರೆಯದೇ ಇದ್ದ 'ಮಾನಸ ನಾಟಕ'ಗಳನ್ನು ಒಳಗೊಂಡು, ಅವರು ನಿರೂಪಿಸಿದ ನಾಟಕ ಸಿದ್ಧಾಂತಕ್ಕೆ ಸಂಬಂಧಿಸಿದ ಲೇಖನಗಳನ್ನು ಸೇರ್ಪಡೆಮಾಡಿ, ಸಮಗ್ರ ನಾಟಕ ಸಂಪುಟವನ್ನು ''ಬೇಂದ್ರೆ ನಾಟ್ಯ ಯೋಗ'' ಎಂಬ ಬೃಹತ್ ಗ್ರಂಥವಾಗಿ ಪ್ರಕಟಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಮಹತ್ವದ ಕಾರ್ಯದ ಅಂಗವಾಗಿ ಬೇಂದ್ರೆಯವರ ೧೧೨ನೆಯ ಜನ್ಮ ದಿನದ ಆಚರಣೆಯ ಕಾಲಕ್ಕೆ ಅವರ ೧೪ ರಂಗ ನಾಟಕಗಳ ಪರಿಷ್ಕೃತ ಹೊಸ ಆವೃತ್ತಿಗಳಾಗಿ ಪ್ರಕಟಿಸುವ ನಿರ್ಣಯವನ್ನು ಕೈಗೊಂಡಿದ್ದೇವೆ. ಈ ನಿರ್ಣಯವನ್ನು ಸಫಲಗೊಳಿಸುವ ದಿಕ್ಕಿನಲ್ಲಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಹುಟ್ಟು ಹಬ್ಬದ ದಿನವಾದ ಮಾಘ ವದ್ಯ ಗುರು ಪ್ರತಿಪದೆ (೨೧-೨-೨೦೦೮)ಯಂದು ಬೇಂದ್ರೆಯವರ ೧೪ ರಂಗ ನಾಟಕಗಳನ್ನು ಪ್ರಕಟಿಸುತ್ತಿದ್ದೇವೆ. ಈ ಎಲ್ಲ ಪ್ರಕಟಣೆಗಳೂ ಪರಿಷ್ಕೃತಗೊಂಡು, ಹೊಸ ವಿನ್ಯಾಸ ಪಡೆದು ಸಂಪಾದಕರ ವಿಸ್ಕೃತ ಭೂಮಿಕೆಗಳನ್ನು ಹೊಂದಿ, ಪ್ರತಿ ನಾಟಕದ ರಸ ಸಮೀಕ್ಷೆಯನ್ನೂ ಒಳಗೊಂಡು ಪ್ರಕಟಗೊಳ್ಳುತ್ತಿವೆ. ಈ ನಾಟಕಗಳ ಹಿಂದಿನ ಮುದ್ರಣಗಳ ಪ್ರತಿಗಳೆಲ್ಲ ಮುಗಿದಿದ್ದು ಕೆಲಕಾಲ ಇವು ಅಲಭ್ಯವಾಗಿದ್ದವು. ಈಗ ರಸಿಕ ವಾಚಕರಿಗೆ ನವರೂಪದೊಡನೆ ಎಲ್ಲ ನಾಟಕಗಳೂ ಲಭ್ಯವಾಗುವಂತೆ ಮಾಡಿದ್ದೇವೆ.

ವರಕವಿ ಡಾ|| ದ. ರಾ. ಬೇಂದ್ರೆಯವರ ಜೀವನ ಮಹಾಕಾವ್ಯ ''ಔದುಂಬರಗಾಥೆ''ಯನ್ನು ವರಕವಿ ಡಾ|| ದ. ರಾ. ಬೇಂದ್ರೆ ಸಂಶೋಧನ ಸಂಸ್ಥೆಯಿಂದ ೨೦೦೩ರಲ್ಲಿ ಆರು ಸಂಪುಟಗಳಲ್ಲಿ ಪ್ರಕಟಪಡಿಸಿದ ಅನಂತರದಲ್ಲಿ, ''ಔದುಂಬರಗಾಥೆ''ಯ ಒಂಭತ್ತನೆಯ ಸಂಪುಟ - ''ಬೇಂದ್ರೆ ನಾಟ್ಯಯೋಗ''

ಪ್ರಕಟಣೆಗೆ ಸಿದ್ಧಗೊಳ್ಳುತ್ತಿದೆ. ಬೇಂದ್ರೆಯವರಿಗೆ 'ಯೋಗ' ಎಂಬ ಶಬ್ದದಂತೆ 'ನಾಟ್ಯ' ಎಂಬ ಶಬ್ದ ವಿಶಿಷ್ಟವಾಗಿ ಕಂಡಿದೆ. ಭರತಮುನಿಯ ಮೌಲಿಕ ಕೊಡುಗೆ - ನಾಟ್ಯಶಾಸ್ತ್ರ. ಇದರಲ್ಲಿ ನಾಟಕ ಕಲೆಯ ಸಕಲಾಂಗಗಳ ಲಕ್ಷಣಗಳ ವರ್ಣನೆ ಇದೆ. ಇದನ್ನು ಆಧಾರ ಗ್ರಂಥವಾಗಿ ಅಭ್ಯಸಿಸಿದ ಬೇಂದ್ರೆ ನಾಟಕವೆಂದರೆ-'ಕರ್ಮಯೋಗ' 'ಚಾಕ್ಷುಷಕ್ರತು' 'ನವಮಾನವನಿರ್ಮಿತಿಯ ದಿವ್ಯಯಜ್ಞ' ಎಂಬ ನಿಲುವಿಗೆ ತಲುಪಿದರು. ಬೇಂದ್ರೆಯವರಿಗೆ ಕಾವ್ಯ-ವಾಕ್‌ಯಜ್ಞ; ನಾಟ್ಯ ಕ್ರಿಯಾಯಜ್ಞ.

ಬೇಂದ್ರೆಯವರ ಕ್ರಿಯಾಯಜ್ಞಕಾರ್ಯ ೧೯೨೦ರಲ್ಲಿ ''ಗೋಲ್'' ನಾಟಕದ ಸೃಷ್ಟಿಯಿಂದ ಪ್ರಾರಂಭವಾಗಿ ೧೯೮೦ರಲ್ಲಿ ''ಮಂದೀ ಮನಿ'' ರಚನೆಯಿಂದ ಮುಕ್ತಾಯಗೊಂಡಿದೆ. ಈ ರಹಸ್ಯವು ೧೯೩೫ರಲ್ಲಿ ಪ್ರಕಟಗೊಂಡ ''ಹುಚ್ಚಾಟಗಳು'' ವರೆಗೆ ಗುಪ್ತವಾಗಿಯೇ ಉಳಿಯಿತು. 'ಗೋಲ್', 'ತಿರುಕರ ಪಿಡುಗು', 'ಸಾಯೋ ಆಟ', 'ದೆವ್ವನ ಮನೆ', 'ಹಳೆಯ ಗೆಣೆಯರು' ಎಂಬ ಐದು ನಾಟಕಗಳಲ್ಲಿ 'ಸಾಯೋ ಆಟ' ಪ್ರಮುಖವಾಯಿತು. ೧೯೫೦ರಲ್ಲಿ 'ಹೊಸ ಸಂಸಾರ ಮತ್ತು ಇತರ ನಾಟಕಗಳು' ಪ್ರಕಟಗೊಂಡಾಗ 'ಉದ್ಧಾರ', 'ನಗೆಯ ಹೊಗೆ', 'ಜಾತ್ರೆ', 'ಮಂದೀ ಮದಿವಿ', 'ಮಂದೀ ಮಕ್ಕಳು' ಎಂಬ ಐದು ನಾಟಕ ಬೆಳಕು ಕಂಡವು. ಇದರಲ್ಲಿ 'ಮಂದೀ ಮದಿವಿ' ಮತ್ತು 'ಮಂದೀ ಮಕ್ಕಳು' ಕೂಡಿ 'ಹೊಸ ಸಂಸಾರ' ಮತ್ತು 'ಜಾತ್ರೆ' ಅನೇಕ ಪ್ರಯೋಗ ಕಂಡವು. ೧೯೮೦ರಲ್ಲಿ ರಚನೆಯಾದ 'ಮಂದೀ ಮನಿ' (ಹೊಸ ಸಂಸಾರದ ಮುಕ್ತಾಯದ ಅಂಕು)ಯೊಂದಿಗೆ - 'ಶೋಭನಾ', 'ಆಥರಾ-ಈಥರಾ' ಮತ್ತು 'ಮಕ್ಕಳು ಅಡಿಗೆಮನೆಗೆ ಹೊಕ್ಕರೆ' ಎಂಬ ನಾಲ್ಕು ಹೊಸ ನಾಟಕಗಳೊಂದಿಗೆ ಬೇಂದ್ರೆಯವರ ಸಮಗ್ರ ನಾಟಕ ಸಂಪುಟವಾಗಿ ಪ್ರಕಟಗೊಳ್ಳುವ ಪೂರ್ವದಲ್ಲಿ, ಡಾ|| ವಾಮನ ಬೇಂದ್ರೆಯವರು ದ. ರಾ. ಬೇಂದ್ರೆಯವರೊಂದಿಗೆ ಚರ್ಚಿಸಿ-ಬೇಂದ್ರೆ ನಾಟ್ಯ ಸೃಷ್ಟಿಯ ಕ್ರಮವನ್ನು ನಿರ್ಣಯಿಸಿದರು. ಇದೇ ಕಾಲಕ್ಕೆ ಬೇಂದ್ರೆಯವರು - 'ಗೋಲ್', 'ತಿರುಕರ ಪಿಡುಗು', 'ಹಳೆಯ ಗೆಣೆಯರು' ಮತ್ತು 'ದೆವ್ವನ ಮನೆ' - ಇವುಗಳಿಗೆ ಇದ್ದ ತಮ್ಮ ನುಡಿಯನ್ನು ಗದ್ಯದಿಂದ ಪದ್ಯಕ್ಕೆ

ಪರಿವರ್ತಿಸಿ-ಸಮೀಕ್ಷಕರ ದೃಷ್ಟಿಗೆ ಹೊಸ ಬೆಳಕನ್ನು ನೀಡಿದರು. 'ಸಾಯೋ ಆಟ', 'ನಗೆಯ ಹೊಗೆ', 'ಜಾತ್ರೆ', 'ಹೊಸ ಸಂಸಾರ' (ಮೂರೂ ಏಕಾಂಕ), 'ಶೋಭನಾ', 'ಮಕ್ಕಳು ಅಡಿಗೆಮನೆಗೆ ಹೊಕ್ಕರೆ' ಮತ್ತು 'ಅಥರಾ-ಈಥರಾ' ಇವುಗಳ ತಮ್ಮ ನುಡಿಯಲ್ಲಿ ಬದಲಾವಣೆ ಮಾಡಿದರು. 'ಉದ್ಧಾರ' ನಾಟಕದ ಲೇಖಕರ ನುಡಿಯನ್ನು ಇದ್ದಕ್ಕಿದ್ದಂತೆ ಇರಲಿ ಎಂದರು. ಇವುಗಳಿಂದಲೂ ಅಪೇಕ್ಷಿತ ಪರಿಣಾಮ ಕಾಣದ ವಾಮನ ಬೇಂದ್ರೆ ೧೯೮೬ರಲ್ಲಿ ಅಂಬಿಕಾತನಯದತ್ತ ವೇದಿಕೆಯಿಂದ ರಂಗ ಶಿಬಿರ ಮಾಡಿ, ನಾಟಕ ಪ್ರಯೋಗಗಳಲ್ಲಿ ಆಗುತ್ತಿರುವ ಹೊಸ ಅಲೆ-ದಿಗ್ದರ್ಶಕರಿಗೆ ಪ್ರಾಶಸ್ತ್ಯ ನೀಡುವುದನ್ನು ಗಮನಿಸಿ-ಲಿಖಿತ ನಾಟಕಗಳಲ್ಲಿಯ ೧೯ ಪ್ರಸಂಗ ಗೀತಗಳೊಂದಿಗೆ ಮತ್ತೆ ೯ ಪ್ರಸಂಗ ಕವನಗಳ ಸೇರ್ಪಡೆ ಮಾಡಿ, ಒಟ್ಟು ೨೮ ಗೇಯ ಗೀತಗಳೊಂದಿಗೆ ೧೯೯೬ರಲ್ಲಿ ಬೇಂದ್ರೆಯವರ ಜನ್ಮ ಶತಮಾನೋತ್ಸವದ ಕಾಲಕ್ಕೆ ಹದಿನಾಲ್ಕೂ ನಾಟಕಗಳ ಹೊಸ ಆವೃತ್ತಿ ಪ್ರಕಟಪಡಿಸಿದರು.

೨೦೦೭ರಲ್ಲಿ 'ಅಂಬಿಕಾತನಯದತ್ತರ ರಂಗಗೀತಗಳು' ಪ್ರಕಟಪಡಿಸಿದಾಗ - (೧) ಲಿಖಿತ ನಾಟಕಗಳ ಪ್ರಸಂಗ ಗೀತಗಳು-೧೯; (೨) ಅಲಿಖಿತ ನಾಟಕಗಳ ಪ್ರಸಂಗಗೀತಗಳು-೧೦; (೩) ಲಿಖಿತ ನಾಟಕಗಳಲ್ಲಿ ಪ್ರಸಂಗ ಕವನ-೯; (೪) ನಾಟ್ಯ ಗೀತಗಳಾಗಬಹುದಾದ ಪ್ರಸಂಗ ಕವನಗಳು-೬ ನಿಶ್ಚಯಿಸಲಾದವು. ಒಟ್ಟು ೪೪ ಕವನಗಳಿಗೆ ಪಂಡಿತ ಕೃಷ್ಣಾಜಿ ಕುರ್ತಕೋಟಿಯವರಿಂದ ಸ್ವರ ಸಂಯೋಜನೆಮಾಡಿ ಕೃತಿ ಪ್ರಕಟಗೊಳಿಸಲಾಯಿತು. ಇದರಿಂದ ಬೇಂದ್ರೆಯವರ ಓದುಗಬ್ಬಗಳಾದ ನಾಟಕಗಳಲ್ಲಿ ಅವರು ಹಾಡುಗಬ್ಬಕ್ಕೆ ಕೊಟ್ಟ ಪ್ರಾಶಸ್ತ್ಯ ಗಮನಾರ್ಹವಾಗಿ ಕಂಡು ಬಂದಿತು.

ಯೋಗಸಾಧನೆಯಿಂದ ಶರೀರ ಪ್ರಕೃತಿ ಸಂಸ್ಕಾರ ಪಡೆಯುವಂತೆ, ನಾಟ್ಯಯೋಗದಿಂದ ಮನದ ಪರಿಪಾಕ ಸಿದ್ಧಪಡಿಸುವುದು ಬೇಂದ್ರೆ ನಾಟಕಗಳ ಗುರಿ. ಬೇಂದ್ರೆಯವರ ಪ್ರತಿಯೊಂದು ನಾಟಕಕ್ಕೂ ವಿಶಿಷ್ಟ ಉದ್ದೇಶವಿದೆ. ಮನರಂಜನೆಯೊಂದಿಗೆ, ಸಾಮಾಜಿಕ ಪರಿವರ್ತನೆಗೆ ಹಾಗೂ ಕೌಟುಂಬಿಕ

ಪರಿವರ್ತನೆಗೆ ಬೇಂದ್ರೆ ನಾಟ್ಯಸೃಷ್ಟಿ ಮಹತ್ತ್ವದ ಕಾರ್ಯ ಮಾಡಿದೆ. ಪ್ರಾರಂಭದ ನಾಟಕಗಳಿಗೆ 'ಹುಚ್ಚಾಟಗಳು' ಎಂದು ಬೇಂದ್ರೆಯವರೇ ನಾಮಕರಣ ಮಾಡಿದ್ದರು. ಇದರ ಉದ್ದೇಶವೆಂದರೆ, ನಾಟಕದ ಗುರಿ ತಿಳಿಯದಿದ್ದರೆ ಹುಚ್ಚಾಟ; ಅದರ ಗುರಿ ಅರಿತರೆ ಅವು ಪ್ರಹಸನ; 'ನಗಿಸಿದರ ನೆನ್ನಿನೆನ್ನಿ ನಕ್ಕಿರಬೇಕು - 'ಸಾಯೋ ಆಟ', 'ಜಾತ್ರೆ' ನೋಡಿ. ಅಳ್ಸಿದರೆ ಬಿಕ್ಕಿ ಬಿಕ್ಕಿ ಅತ್ತಿರಬೇಕು - 'ನಗೆಯ ಹೊಗೆ' ನೋಡಿ. ಈ ನಗೆ ಮತ್ತು ಅಳು ಪ್ರೇಕ್ಷಕರನ್ನು ಎಚ್ಚರಗೊಳಿಸಲೆಂದೇ ಬೇಂದ್ರೆ ಉಪಯೋಗಿಸಿದ ತಂತ್ರ. 'ಉದ್ಧಾರ' ಮತ್ತು 'ನಗೆಯ ಹೊಗೆ' ಆವಿದ್ಧ ಪ್ರಯೋಗಗಳಾದರೆ; ಉಳಿದೆಲ್ಲ ನಾಟಕ ಸುಕುಮಾರ ಪ್ರಹಸನಗಳೇ ಆಗಿವೆ. ಬೇಂದ್ರೆಯವರ ಪ್ರಹಸನಗಳ ಗುರಿ ಒಂದೇ-ನಾಟಕಗಳಿಂದ ಜೀವನ ಸುಧಾರಿಸಬೇಕು; ಜೀವನದಲ್ಲಿ ಶಾಂತಿ ನೆಲೆಸಬೇಕು, ಮತ್ತು ಆನಂದ ಸಮೃದ್ಧವಾಗಬೇಕು. ಕೊಲ್ಲುವನಗೆ ಬೇಂದ್ರೆಯವರಿಗೆ ತ್ಯಾಜ್ಯ, ಬಾಳುವನಗೆ ಅವರಿಗೆ ಗ್ರಾಹ್ಯ. ಸಂತಸವನ್ನು ಬಿತ್ತುವ ಹಾಗೂ ದುಃಖವನ್ನು ಶಮನಗೊಳಿಸುವ ಸಂಸ್ಕಾರ ಅಪೇಕ್ಷಿತ. ನವಮಾನವೀಯತೆಯ ಆವಿರ್ಭಾವ ಬೇಂದ್ರೆ ನಾಟ್ಯ ಸೃಷ್ಟಿಯ ಪ್ರಮುಖ ಆಶಯ. ಎಲ್ಲ ನಾಟಕಗಳಲ್ಲಿ ಸಹಜತೆ ಇದೆ; ಆಡಂಬರವಿಲ್ಲ. ಪ್ರೇಕ್ಷಣೀಯ ತಂತ್ರಗಾರಿಕೆ, ಆಹಾರ್ಯ ಅಲಂಕರಣಕ್ಕಿಂತ ನಿತ್ಯ ಜೀವನದ ಸಾಮಿಪ್ಯ ಬೇಂದ್ರೆಯವರಿಗೆ ಇಷ್ಟ ಆಂಗಿಕ ಮತ್ತು ವಾಚಿಕ ಅಭಿನಯ ಅರ್ಥಪೂರ್ಣವಾದಾಗ ನಾಟಕ ಸಾರ್ಥಕವಾಗುತ್ತದೆ. ಪರಿಣಾಮಕಾರಿ ನಾಟಕ ಪ್ರಯೋಗದಿಂದ ಸಾರ್ಥಕ ಜೀವನದ ಪರಮ ಅರ್ಥಕ್ಕೆ ಬೇಂದ್ರೆ ಮಹತ್ತ್ವ ಕೊಟ್ಟಿದ್ದರಿಂದ, ಅವರ 'ನಾಟ್ಯಯಜ್ಞ' ಮಂಗಲಕಾರಕ, ಮಂಗಲಪೂರಕವಾಗಿದೆ.

ಈ ಹಿನ್ನೆಲೆಯಲ್ಲಿ ಬೇಂದ್ರೆ ಸಂಶೋಧನಾ ಸಂಸ್ಥೆ ಬೇಂದ್ರೆ ರಚಿತ ನಾಟಕಗಳ ಪರಿಷ್ಕರಣೆಯ ಅವಶ್ಯಕತೆಯನ್ನು ಕಂಡುಕೊಂಡಿತು. ಇದರ ವೈಶಿಷ್ಟ್ಯಗಳು ಹೀಗಿವೆ - (೧) ನಾಟಕಗಳ ರಚನಾ ಕಾಲ ನಿಶ್ಚಯಿಸಲಾಯಿತು. (೨) ನಾಟಕಗಳ ಕ್ರಮವನ್ನು ಸರಿಪಡಿಸಲಾಯಿತು. (೩) ಧಾರವಾಡ ಆಕಾಶವಾಣಿ ಪತ್ರಗಳನ್ನು ಆಧರಿಸಿ, 'ಶೋಭನಾ', 'ಮಕ್ಕಳು ಅಡಿಗೆಮನೆಗೆ ಹೊಕ್ಕರೆ' ಮತ್ತು 'ಆಥರಾ-ಈಥರಾ' ನಾಟಕಗಳ ಕಾಲ ನಿಶ್ಚಯಿಸಲಾಯಿತು. (೪) ಸಮೀಕ್ಷಕರಿಗೆ,

ದಿಗ್ದರ್ಶಕರಿಗೆ, ಹಾಗೂ ನಟರಿಗೆ ಅನುಕೂಲವಾಗುವಂತೆ ನಾಟಕಗಳ ಮುದ್ರಣ ಮಾಡಲಾಯಿತು. ಈ ಪರಿಷ್ಕರಣೆಗಳೊಂದಿಗೆ ಪ್ರಕಟಗೊಳಿಸುತ್ತಿರುವ ನಾಟಕಗಳನ್ನು ಅವುಗಳ ಔಚಿತ್ಯಗಳಿಗೆ ಪ್ರಾಶಸ್ತ್ಯಕೊಟ್ಟು ಪ್ರಯೋಗ ಮಾಡಿದಾಗ ನಾಟಕಕಾರ ಬೇಂದ್ರೆಯವರ ಮೌಲ್ಯಮಾಪನಕ್ಕೆ ಹೊಸ ಬೆಳಕು ದೊರೆಯುತ್ತದೆ ಎಂಬ ಪ್ರತೀಕ್ಷೆಯಲ್ಲಿ ನಾವಿದ್ದೇವೆ. ಈ ಹೊಸ ಪ್ರಯತ್ನವನ್ನು ನಾಟಕ ರಸಿಕರು, ಸಮೀಕ್ಷಕರು ಸ್ವಾಗತಿಸುವರೆಂದು ನಂಬಿರುವೆವು.

"ಬೇಂದ್ರೆ ಕುಟೀರ",
ಹುಬ್ಬಳ್ಳಿ - ೩೦
೨೧-೨-೨೦೦೮, ಗುರುಪ್ರತಿಪದೆ,
ಡಾ॥ ದ. ರಾ. ಬೇಂದ್ರೆ ೧೧೨ನೆಯ ಜನ್ಮದಿನ

ಡಾ॥ ಕೆ. ಎಸ್. ಶರ್ಮಾ
ನಿರ್ದೇಶಕರು
ವರಕವಿ ಡಾ॥ ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡಮಿ.

ಬೇಂದ್ರೆ ನಾಟ್ಯಯೋಗ

ವರಕವಿ ಡಾ|| ದ. ರಾ. ಬೇಂದ್ರೆಯವರಿಗೆ ಯೋಗ ಶಬ್ದ, ಪರಿಕಲ್ಪನೆ, ಸಾಧನೆ, ಪ್ರಕ್ರಿಯೆ ಅತ್ಯಂತ ಪ್ರಿಯವಾದ ವಸ್ತು. ಕಾವ್ಯೋದ್ಯೋಗ, ಪ್ರಮುಖವಾಗಿ ವ್ಯಕ್ತಿಗತ ಸಾಧನೆಯಾದರೆ; ನಾಟ್ಯಯೋಗ ಪ್ರಮುಖವಾಗಿ ಸಾಮೂಹಿಕ ಸಾಧನೆ. ನಾಟ್ಯಶಾಸ್ತ್ರ ನಿರ್ಮಾಪಕ-ಭರತ ಮುನಿಯಾಗಿದ್ದನೆಂಬುದು ಗಮನಾರ್ಹವಾದ ವಿಷಯ.

ಭಾವದ ಸಂಕೇತ-ಭ, ರಾಗದ ಸಂಕೇತ-ರ ಮತ್ತು ತಾಲದ ಸಂಕೇತ-ತ. ಭಾವಗಳ ಅಭಿನಯ, ರಾಗೋದ್ದೀಪಕ ಸಂಗೀತ ಮತ್ತು ತಾಲಬದ್ಧವಾದ ನೃತ್ಯ ಇವುಗಳ ಸಂಯೋಗ- ನಾಟಕದ ಮರ್ಮ.

ನಾಟಕಕಾರ, ನಾಟಕವನ್ನು ಬರೆದಾಗ, ಅದು ಒಂದು ಕ್ರಿಯೆಯ ಅರ್ಧಭಾಗ ಮಾತ್ರ. ಆ ನಾಟಕದ ಪ್ರಯೋಗಗೊಂಡಾಗಮಾತ್ರ, ಅದು, ತನ್ನ ಸಂದೇಶವನ್ನು ಪ್ರೇಕ್ಷಕರಿಗೆ ಮುಟ್ಟಿಸಿ, ಇಚ್ಚಿತ ಕ್ರಿಯೆಯನ್ನು ಪೂರ್ಣಗೊಳಿಸುತ್ತದೆ.

ಕ್ಷಾತ್ರ ಯುಗದಲ್ಲಿ, ನಾಟಕವು- ವೀರ, ಶೃಂಗಾರ, ಹಾಸ್ಯರಸ ಪ್ರಧಾನವಾಗಿ, ಯುದ್ಧವಿರರನ್ನು ನಿರ್ಮಾಣ ಮಾಡುವ ಒಂದು ವಿಶೇಷ ಉದ್ದೇಶವನ್ನಿಟ್ಟುಕೊಂಡು; ಅದರ ಜೊತೆಜೊತೆಗೆ ವಿಲಾಸ ಮತ್ತು ಮನರಂಜನೆಯ ಸಾಧನವಾಗಿತ್ತು.

ಭಕ್ತಿ ಯುಗದಲ್ಲಿ ನಾಟಕವು- ಭಕ್ತಿ, ಕರುಣ, ಶಾಂತರಸ ಪ್ರಧಾನವಾಗಿ, ವಿರಕ್ತಿಯ ಪ್ರಚಾರಕ್ಕಾಗಿ ಪುರಾಣ ಪ್ರಸಿದ್ಧ ಪ್ರಸಂಗಗಳ ಪ್ರಯೋಗಗಳನ್ನು ಮಾಡುವಲ್ಲಿ ಪ್ರತಿಷ್ಠೆಯನ್ನು ಪಡೆಯಿತು.

ಇಂದಿನ ಈ ಆಧುನಿಕ ಯುಗದಲ್ಲಿ, ರಾಜರ ಪ್ರಾಮುಖ್ಯ ಹೋಗಿ, ಪ್ರಜೆಗಳೇ ಪ್ರಮುಖರಾದರು. ಭಾರತದ ಸ್ವಾತಂತ್ರ್ಯದ ಅನಂತರದಲ್ಲಿ, ಸಂಸ್ಥಾನಗಳ ವಿಲೀನೀಕರಣವಾಗಿ, ಪ್ರಜಾಪ್ರಭುತ್ವದ ಆಳಿಕೆ ಪ್ರಾರಂಭವಾಯಿತು.

ಬೇಂದ್ರೆಯವರ ನಾಟಕಗಳಲ್ಲಿ ಐತಿಹಾಸಿಕ ವ್ಯಕ್ತಿಗಳಿಲ್ಲ, ಪೌರಾಣಿಕ ಪ್ರಸಂಗಗಳಿಲ್ಲ.

'ಜಾತ್ರೆ' ಮತ್ತು 'ಸಾಯೋ ಆಟ' ಇವುಗಳಲ್ಲಿ ಮಾತ್ರ ಸಂಸ್ಥಾನಿಕರ ವಿಚಿತ್ರ ಮನೋವೃತ್ತಿ ಹಾಗೂ ರಾಜಶಾಹಿಯ ಅವನತಿಯನ್ನು ಬೇಂದ್ರೆಯವರು ತೋರಿಸಿದ್ದಾರೆ. ಜಾತ್ರೆಯ ಸಂಸ್ಥಾನಿಕ, ತನ್ನ ವರ್ಷದ ಆದಾಯ ಕಳೆದುಕೊಳ್ಳಲು ಸಿದ್ಧನಾಗದೆ, ಪ್ಲೇಗಿಗೆ ಬಲಿಯಾಗಿ, ಪ್ರಾಣವನ್ನೇ ಕಳೆದುಕೊಳ್ಳುತ್ತಾನೆ. ಸಾಯೋ ಆಟದ ಸಂಸ್ಥಾನಿಕ, ನ್ಯಾಯ-ಅನ್ಯಾಯಗಳ ತಾಕಲಾಟದಲ್ಲಿ, ಪುನರ್ಜನ್ಮದ ಲಾಲಸೆಯಿಂದ, ಶೂಲಕ್ಕೇರಲು ಸಿದ್ಧನಾಗುತ್ತಾನೆ. ಈ ಎರಡೂ ಸಂಸ್ಥಾನಿಕರ ಆಳಿಕೆಯಲ್ಲಿ ಪ್ರಜೆಗಳು ಮೂಕಬಲಿಯಾಗಿದ್ದಾರೆ.

'ತಿರುಕರ ಪಿಡುಗು'-ದಾನಿಗಳ ತಿರುಕುತನ ಹಾಗೂ ಭಿಕ್ಷುಕರ ಭಿಕ್ಷಾಟನಲೀಲೆಯನ್ನು ಬಿಚ್ಚಿತೋರಿಸುತ್ತದೆ. ಪತಿತರನ್ನು ಪಾವನಗೊಳಿಸುವ ಸಮಾಜ ಸುಧಾರಕರ ಸಂಘಟನೆಯ ಕೌಶಲ್ಯ, ವಿಫಲವಾಗುವುದನ್ನು, ಅನೇಕ ದೃಶ್ಯಗಳ ಸಂಯೋಜನೆಯಿಂದ, ಬೇಂದ್ರೆಯವರು 'ಉದ್ಧಾರ' ನಾಟಕದಲ್ಲಿ ತೋರಿಸಿದ್ದಾರೆ.

ಅಧಿಕಾರ ಮನೋವೃತ್ತಿ, ಪುನರ್ಜನ್ಮ ವಿಶ್ವಾಸ, ತಿರಕತನ ಹಾಗೂ ಮೂರ್ತಿಪೂಜೆ ಎಂಬ ಮನೋವಿಕಾರಗಳಿಂದ ವಿಮೋಚನೆ ಹೊಂದಿದ ಸಮಾಜದ ಅಶವ್ಯಕತೆಯನ್ನು ಬೇಂದ್ರೆಯವರ ಯೌಗಿಕ ದೃಷ್ಟಿ ಕಂಡ ಸತ್ಯವಾಗಿದೆ. ಬೇಂದ್ರೆಯವರು ಸೃಷ್ಟಿಸಿದ ರಂಗ ನಾಟಕಗಳಲ್ಲಿ ಈ ನಾಲ್ಕು ನಾಟಕಗಳ ಗುಂಪು ಒಂದನೆಯ ಹಂತ.

ಸಮಾಜದ ಮುಖ್ಯ ಘಟಕ ಕುಟುಂಬ. ಕುಟುಂಬ ಸಂಸ್ಥೆಯ ಪಾವಿತ್ರ್ಯವನ್ನು ಕಾಪಾಡುವುದು ಬೇಂದ್ರೆಯವರಿಗೆ ಪ್ರಥಮ ಕರ್ತವ್ಯವಾಗಿ ಕಂಡಿತು. ಸ್ತ್ರೀಯ ಅನೇಕ ದುಃಖಗಳಿಗೆ, ಸ್ತ್ರೀಯರ ಮಾತಿನ ಮೋಡಿಯೇ ಕಾರಣ. ಸಮಾಜದ ಮೂಢ ರೂಢಿಗಳು ಮುಗ್ಧಜೀವದ ಬಲಿಯನ್ನು ತೆಗೆದುಕೊಳ್ಳುವ ರೀತಿ, ಬೇಂದ್ರೆಯವರ 'ನಗೆಯ ಹೊಗೆ' ನಾಟಕದ ವಸ್ತು. ಮಗಳ ಮದುವೆ ಎಂಬುದು ಅನೇಕ ಕುಟುಂಬಗಳ ಪ್ರಧಾನ ದುಃಖ. ಇದು ಇಲ್ಲದಂತಾಗಬೇಕು ಎಂಬ ಉದ್ದೇಶ 'ನಗೆಯ ಹೊಗೆ' ನಾಟಕಕ್ಕಿದೆ.

'ಹಳೆಯ ಗೆಣೆಯರು' ನಾಟಕದ ಎಲ್ಲ ಪಾತ್ರಗಳು ಮುಖವಾಡ ಹೊತ್ತ ಪಾತ್ರಗಳು. ಅಂತರಂಗ ಮತ್ತು ಬಹಿರಂಗಗಳ ಕಣ್ಣುಮುಚ್ಚಾಟವನ್ನು ತೋರಿಸಿ,

ಪವಿತ್ರೀಕರಣಕ್ಕೆ ಸ್ತ್ರೀಯ ಸಿದ್ಧತೆ ಮತ್ತು ಒಪ್ಪಿಗೆ ಇರುವಂತೆ ಪುರುಷರ ಅನುಮತಿ ಇಲ್ಲ ಎಂಬುದಾಗಿ ಬೇಂದ್ರೆಯವರು ಸೂಚಿಸಿದ್ದಾರೆ. ಬೇಂದ್ರೆಯವರಲ್ಲಿ ಇದ್ದ ಸ್ತ್ರೀಗೌರವ ಭಾವನೆಯೆ ಇಂಥ ಪಾತ್ರ ಸೃಷ್ಟಿಗೆ ಕಾರಣವಾಗಿರಲೂ ಸಾಕು. ಈ ನಾಟಕದಲ್ಲಿ, ಪುರುಷರ ಸೋಗು, ಸತ್ಯವನ್ನು ಅಡಗಿಸಲು ಪ್ರಯತ್ನಿಸುತ್ತದೆ. ಸ್ತ್ರೀಪಾತ್ರ, ಸತ್ಯವನ್ನು ಎದುರಿಸಿ, ಒಪ್ಪಿಕೊಂಡು ಪ್ರಗತಿಯತ್ತ ಸಾಗಿದೆ. ಪುರುಷ ಪಾತ್ರ ಅವರವರ ಮನಸ್ಸಿನ ಬಂಧನದಲ್ಲಿ ಸಿಕ್ಕು ತೊಳಲಾಡಿದರೆ; ಸ್ತ್ರೀಪಾತ್ರ ಮುಕ್ತಿಯನ್ನು ಹೊಂದಿದೆ. ವಿರಕ್ತಿಯ ತೋರಿಕೆ, ಅನುರಕ್ತಿಯ ಗೋರಿ ಎಂಬುದು ಈ ನಾಟಕದ ಜೀವಾಳ.

ದೇವರು ಮತ್ತು ದೆವ್ವ ಈ ಕಲ್ಪನೆಗಳು ಕುಟುಂಬಕ್ಕೆ ಕಾಡುವ ರೀತಿಯನ್ನು ಬೇಂದ್ರೆಯವರು 'ದೆವ್ವನ ಮನೆ' ನಾಟಕದಲ್ಲಿ ನಿರೂಪಿಸಿದ್ದಾರೆ. ಆಧಿ ಎಂಬ ಮನೋರೋಗಕ್ಕೆ ಪರಿಹಾರ ಜ್ಞಾನ. ಅಜ್ಞಾನದ ಮೂಢ ಕಲ್ಪನೆಯಾದ ದೆವ್ವಗಳ ಸೃಷ್ಟಿ ಒಂದು ಕಾಲದ ಸಮಾಜಕ್ಕೆ ತಟ್ಟಿದ ವ್ಯಾಧಿಯಾಗಿತ್ತು. ಆಧಿ ಮತ್ತು ವ್ಯಾಧಿ ಗಳಿಂದ ಮುಕ್ತವಾದ ಕುಟುಂಬವು ಸಜ್ಞಾನಿಯಾಗಿ, ವಿವಿಧ ವಿದ್ಯೆಗಳ ಉದರಪೋಷಕರ ಜಾಲಗಳಿಗೆ ಬಲಿಯಾಗದೆ ಉಳಿಯಬಲ್ಲದು ಎಂಬ ಈ ನಾಟಕದ ಸಂದೇಶ, ಕ್ರಾಂತಿಕಾರಕವಾಗಿದೆ. ಇದು ಬೇಂದ್ರೆ ನಾಟಕ ಸೃಷ್ಟಿಯ ಎರಡನೆಯ ಹಂತ.

ಮಕ್ಕಳ ಮನಸ್ಸಿಗೆ ವಿವಿಧ ರೂಪ ಬರಲು ಪರಿಸರ, ಶಿಕ್ಷಣ ಮತ್ತು ಕಾಲಮಾನ ಕಾರಣ. ತಂದೆ ತಾಯಿಗಳ ದುರ್ಲಕ್ಷ ಮಕ್ಕಳ ಮನೋಲೋಕವನ್ನು ಕದಡುತ್ತದೆ. ಆದುದರಿಂದ ಮಕ್ಕಳ ಜೀವನದಲ್ಲಿ ತಂದೆ ತಾಯಿಯ ಮಹತ್ವವನ್ನು 'ಮಕ್ಕಳು ಅಡಿಗೆಮನೆಗೆ ಹೊಕ್ಕರೆ' ಎಂಬ ಅತಿಚಿಕ್ಕ ನಾಟ್ಯ ಪ್ರಸಂಗದಲ್ಲಿ ಬೇಂದ್ರೆ ಸ್ಪಷ್ಟಪಡಿಸಿದ್ದಾರೆ.

'ಶೋಭನಾ' ನಾಟಕದ ಪತಿ-ಪತ್ನಿ ನವಯುಗದ ದಾಂಪತ್ಯವಾಗಿ, ಹಳೆಯ ಕಾಲದ ಸ್ತ್ರೀಯರ ಸ್ವಭಾವದ ಗೇಲಿಯನ್ನು ಮಾಡುತ್ತಾರೆ. ಇವರನ್ನು ಟೀಕಿಸುವಲ್ಲಿ ಪ್ರೌಢ ಸ್ತ್ರೀಯರು ಸಮಾಧಾನವನ್ನು ಹೊಂದಬೇಕಾಗುತ್ತದೆ.

'ಆಥರಾ-ಈಥರಾ' ನಾಟಕದಲ್ಲಿ ಪುರುಷನು ಯಾವುದೇ ಕಾರಣದಿಂದ

ಸ್ವಸ್ತ್ರೀಯನ್ನು ಧಿಕ್ಕರಿಸಿ ತನ್ನ ಜೀವನದ ಗುರಿಯನ್ನು ಸಾಧಿಸುವ ಮೋಹಕ್ಕೆ ಬಲಿಯಾಗಬಾರದು, ಎಂದು ಬೇಂದ್ರೆಯವರು ಸಾರಿದ್ದಾರೆ. ಈ ಮೂರು ಕೌಟುಂಬಿಕ ನಾಟಕಗಳ ಜೊತೆಗೆ ಬೇಂದ್ರೆಯವರು ಸೃಷ್ಟಿಸಿದ ಒಂದೇ ಒಂದು ಪೂರ್ಣಾವಧಿ ನಾಟಕ 'ಹೊಸ ಸಂಸಾರ'.

ಈ 'ಹೊಸ ಸಂಸಾರ'ದಲ್ಲಿ 'ಮಂದೀ ಮದಿವಿ', 'ಮಂದೀ ಮಕ್ಕಳು' ಮತ್ತು 'ಮಂದೀ ಮನಿ' ಎಂಬ ಮೂರು ಅಂಕುಗಳಿವೆ. ಈ ಮೂರಕ್ಕೂ ಪ್ರತ್ಯೇಕತೆಯೂ ಇದೆ ಹಾಗೂ ಐಕ್ಯವೂ ಇದೆ. ಸಂಸಾರದಲ್ಲಿ ಭೇದಗಳಿದ್ದು - ಪ್ರತ್ಯೇಕತೆ ಇದ್ದೂ; ಅಭೇಧ-ಐಕ್ಯವನ್ನು ಸಾಧಿಸಬೇಕಾಗುತ್ತದೆ ಎಂಬ ಸಿದ್ಧಾಂತ ಈ ನಾಟಕದ ಬೆನ್ನೆಲಬು. 'ಹೊಸ ಸಂಸಾರ' ಹಾಗೂ 'ಆಥರಾ-ಈಥರಾ' ಈ ಎರಡೂ ನಾಟಕಗಳಲ್ಲಿ ತ್ರಿವಳಿಯ ತಂತ್ರವನ್ನು ಬೇಂದ್ರೆ ಪ್ರಯೋಗಿಸಿರುವುದು ಒಂದು ನಾವೀನ್ಯತೆ.

ಕಳ್ಳ, ವಿಧವೆ, ಆಳು ಹೋಳುಗಳ ಸಂತಾನ ಇವುಗಳ ಬಗ್ಗೆ ಅನುಕಂಪ ಹಾಗೂ ಮಾನವೀಯ ದೃಷ್ಟಿಕೋನ ರೂಪತಾಳಿದಾಗ ಮಾತ್ರ ಹೊಸ ಸಂಸಾರಗಳು ಸುಖಪ್ರದವಾದಾವು ಎಂದು ಬೇಂದ್ರೆಯವರ ನಾಟ್ಯಯೋಗದ ಉತ್‌ಯೋಗ ದೃಷ್ಟಿ ಕಂಡುಕೊಂಡಿದೆ.

ಬೇಂದ್ರೆಯವರ ನಾಟಕಗಳಲ್ಲಿ ಸ್ತ್ರೀ ಪಾತ್ರದ ವಿವಿಧ ಮುಖಗಳು ಅಭ್ಯಸನೀಯವಾಗಿವೆ. 'ಸಾಯೋ ಆಟ'ದ ಗಂಡಸತ್ತ ಸ್ತ್ರೀ, ಹಾಗೂ ಸೂಳೆ, 'ತಿರುಕರ ಪಿಡುಗು'ನಲ್ಲಿಯ ಸ್ತ್ರೀ ಭಿಕ್ಷುಕಿಯರು, 'ಉದ್ಧಾರ' ಹಾಗೂ 'ಗೋಲ್' ನಾಟಕಗಳಲ್ಲಿಯ ಸ್ತ್ರೀರಾಹಿತ್ಯ, 'ನಗೆಯ ಹೊಗೆ'ಯ ಕನ್ಯಾಬಲಿ, 'ಹಳೆಯ ಗೆಣೆಯರ'-ನರ್ಸ, 'ದೆವ್ವನ ಮನೆ'ಯ ಅತ್ತಿ-ಸೊಸಿ, 'ಶೋಭನಾ'ದ ಶೋಭನಾ, 'ಆಥರಾ-ಈಥರಾ'ದ ವಾಸಂತಿ, ಲೈಲಾ, 'ಮಕ್ಕಳು ಅಡಿಗೆಮನೆ ಹೊಕ್ಕರೆ'ಯ ತಾಯಿ-ಮಗಳು ಮತ್ತು 'ಹೊಸ ಸಂಸಾರ'ದ ಮಂದಿ, ಅಂಬಕ್ಕಾ, ಫಕೀರಿ - ಇವರು ಬೇಂದ್ರೆ ನಾಟ್ಯಯೋಗ ದೃಷ್ಟಿಯ ಆಧಾರ ಸ್ತಂಭಗಳಾಗಿದ್ದಾರೆ.

ಹಲವರು, ಕೆಲವರು ಗುಂಪುಗೂಡಿ ಇತರರ ಮನರಂಜನೆಗಾಗಿ ಮಾಡುವ ನಾಟಕಗಳು ಸಾಮಾನ್ಯವಾಗಿ ಕುಟುಂಬ ಸಂಸ್ಥೆಗೆ ಮಾರಕವಾಗುವ ಸಾಧ್ಯತೆ ಇರುತ್ತದೆ. ಆದುದರಿಂದ ನಾಟಕಕಾರ, ನಟ, ದಿಗ್ದರ್ಶಕ, ವಿವಿಧ ಕಲಾವಿದರು

ಕುಟುಂಬದ ಪ್ರತಿಷ್ಠಿತರಾಗಿದ್ದು, ನೆರೆಹೊರೆಯ ಕುಟುಂಬಗಳೊಂದಿಗೆ ಆತ್ಮೀಯ ಸಂಬಂಧಗಳನ್ನು ಪ್ರಸ್ಥಾಪಿಸಬಲ್ಲವರಾಗಿ, ಕೂಡಿಕೊಂಡು ಒಂದು ನಾಟಕ ಸಂಸ್ಥೆಯನ್ನು ಕಟ್ಟಿ, ನಾಟಕಗಳನ್ನು ಅಭಿನಯಿಸಿದಾಗ ಮಾತ್ರ 'ನಾಟ್ಯಯೋಗ'ದ ಉನ್ನತ ಆದರ್ಶವು ಪ್ರೇಕ್ಷಕರಿಗೆ ತಲುಪಿ, ಅವರಲ್ಲಿ ಹೊಸ ಜಾಗೃತಿ ಹಾಗೂ ಹೊಸ ಪರಿವರ್ತನೆ ಮಾಡಬಲ್ಲವು ಎಂಬುದು ಬೇಂದ್ರೆಯವರ ವಿಶಿಷ್ಟ ದೃಷ್ಟಿ. 'ಸಮಾಜದಲ್ಲಿ ಏನೇನು ಬೇಡವೋ ಅವುಗಳ ನಿರ್ಮೂಲನೆ ಹಾಗೂ ಈ ಬೇಡಗಳ ನಿರ್ಮೂಲನೆಯಿಂದ ಉತ್ತಮ ಕುಟುಂಬಗಳ ನಿರ್ಮಾಣ'-ಈ 'ನಾಟ್ಯಯೋಗ' ದೃಷ್ಟಿಯುಳ್ಳ ನಾಟಕಕಾರ, ದಿಗ್ದರ್ಶಕ, ಕಲಾವಿದಮೇಳ, ಸಹೃದಯ ವಿಮರ್ಶಕಮೇಳ ಮತ್ತು ಪ್ರೇಕ್ಷಕರಿಂದ ಮಾತ್ರ ಈ ಪರಿವರ್ತನೆ ಸಾಧ್ಯ. ಇವುಗಳಲ್ಲಿ ಯಾವುದೇ ಒಂದು ಘಟಕದಲ್ಲಿ ದೋಷ ಉಳಿದರೂ, ಅದು ನಾಟ್ಯಪಾಕವನ್ನು ಹದಗೆಡಿಸುತ್ತದೆ ಎಂಬುದನ್ನು ಬೇಂದ್ರೆಯವರು ಕಂಡುಕೊಂಡಿದ್ದರು. ಆದುದರಿಂದ 'ನಾಟ್ಯಯೋಗ' ಎಂಬುದೇ ಅವರ ಆದರ್ಶವಾಗಿತ್ತು. 'ಆದರ್ಶವಿಲ್ಲದ ಬಾಳು ಹಾಳು' ಎಂಬುದೇ ಬೇಂದ್ರೆಯವರ 'ಗೋಲ್' ನಾಟಕದ ಸಂದೇಶ. 'ಗೋಲ್' ನಾಟಕದ ಪಾತ್ರಗಳು ಆದರ್ಶದ ಬೆಳಕಿಗಾಗಿ ಹಾತೊರೆಯುತ್ತವೆ.

ಬೆಳಕು ಅಂದರೆ ಬರೀ ಬೆಳಗಲ್ಲಾ, ಆ ಬೆಳಕು - ಜ್ಞಾನ, ಸಂಜ್ಞಾನ, ಪ್ರಜ್ಞಾನ, ಧೃತಿ, ಸ್ಮೃತಿ, ರಸ, ಅಮೃತಕ್ಕೆ ಸಮಾನ. ನಾಟಕದಿಂದ 'ರಸೋವೈಸಃ' ಎಂಬ ಅರಿವನ್ನು ಪಡೆಯಬಹುದು ಎಂದು, ಭರತ ಮುನಿಯ ಯೋಗದೃಷ್ಟಿ ಕಂಡಿತ್ತು. ಅದನ್ನೇ ಬೇಂದ್ರೆಯವರು ತಮ್ಮ ನಾಟಕಗಳ ಸೃಷ್ಟಿಯಲ್ಲಿ ಕಂಡುಕೊಂಡಿದ್ದರು. ಇದು ಅವರ 'ನಾಟ್ಯಯೋಗ'ದ ದರ್ಶನ ಸಿದ್ಧಾಂತ.

''ಬೇಂದ್ರೆ ಕುಟೀರ'',
ಹುಬ್ಬಳ್ಳಿ - ೩೦
೨೧-೨-೨೦೦೮, ಗುರುಪ್ರತಿಪದೆ,
ಡಾ|| ದ. ರಾ. ಬೇಂದ್ರೆ ೧೧೨ನೆಯ ಜನ್ಮದಿನ

ಡಾ|| ವಾಮನ ಬೇಂದ್ರೆ
ಸಹ ನಿರ್ದೇಶಕರು
ವರಕವಿ ಡಾ|| ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡಮಿ.

ಹಳೆಯ ಗೆಳೆಯರು

(ರಚನೆ : ೧೯೩೪)

‘‘ಮನದ ಪದರು ಪದರುಗಳಲ್ಲಿ ನುಸುಳಾಡಿ ಒಬ್ಬರನ್ನೊಬ್ಬರು ತಪ್ಪಿಸಲು ಹವಣಿಸುವ ‘‘ಹಳೆಯ ಗೆಣೆಯರು’’ - ಸಭ್ಯವೇಷದೊಳಗಿನ ಹುಚ್ಚು ಮೂಳರು’’

- ದ. ರಾ. ಬೇಂದ್ರೆ

ಲೇಖಕರ ನುಡಿ

ಹಳೆಯ ಗೆಣೆಯರು-
ವೇಷ ಬದಲಾದರೆ ಭಾಷೆಯೂ ಬದಲಾದೀತು,
ಅದೊಂದು
ನಾಟಕ ಮಾತ್ರ.
ಆದರೆ,
ವೇಷದೊಂದಿಗೆ ಅದರೊಳಗಿನ
ಗುಣ ಪರಿವರ್ತನೆಯಾಗುವುದು
ಅಷ್ಟು ಸುಲಭವಲ್ಲ.

ಅಪರಿವರ್ತನೀಯ
ವಾಸನೆಗಳಿಗೆ ಹೊಸ ವೇಷವು
ಹೊಸ ಮುಸುಕಿದ್ದಂತೆ.
ಹೊಸ ಮುಸುಕಿನ ಆಟವನ್ನು
ಆಡುವುದು,
ವಾಸನಾ ಪ್ರಪಂಚಕ್ಕೆ
ಮೆಚ್ಚಿಗೆಯ ವಿಷಯ.

ಒಂದು ಕಡೆಗೆ
ತನ್ನ ದೋಷವನ್ನು ಒಳಗೆ ಅಡಗಿಸುವುದು;
ಇನ್ನೊಂದು ಕಡೆಗೆ
ಪರರ ದೋಷವನ್ನು ಇಣಿಕಿ ನೋಡುವುದು
ಮನುಷ್ಯ ಸ್ವಭಾವದ ಅಂಗವಾಗಿದೆ.

'ಕಳ್ಳನ ಹೆಜ್ಜೆ ಕಳ್ಳ ಬಲ್ಲ'
ಎಂಬಂತೆ,
ಗುಣದೋಷಗಳಿಗೆ ತಮ್ಮ ಜಾತಿಯನ್ನು
ಗುರುತಿಸುವ ಕಣ್ಣಿದೆ.
ನಾಚಿ, ನಾಚಿಕೆಗೇಡಾಗುವ
ಒಂದು ಪರ್ಯಾಯವಿದೆ.

ನಾಚಿಕೆಗೇಡಾದರೂ
ನಾಚಿಕೆ ಮೀರಬೇಕೆಂಬ
ನೈರ್ಮಲ್ಯದ ಮುಂದಡಿಬೇಕು.
ಬುದ್ಧಿಯು
ವೇಷಭಾಷಾಪಲ್ಲಟದಲ್ಲಿ ತೊಡಗಿದಾಗ
ಹೃದಯವು
ಭಾವಪಲ್ಲಟದತ್ತ ಹೋಗುತ್ತದೆ.

ಈ ಚಿಕ್ಕನಾಟಕವು ರಂಗಭೂಮಿಗೆ
ಅಪರೂಪವಾಗಿ ಬಂದಿದೆ.
ಸಮಾಜವು,
ಚಿಕ್ಕಮಕ್ಕಳು ಕವಿದ ನೆರಳಿಗೆ ಬೆದರುವಂತೆ;
ಪ್ರತಿಷ್ಠಿತರ ದೋಷದರ್ಶನದಲ್ಲಿ
ಹಿಂಜರಿಯುತ್ತಿದೆ.
ಎಲ್ಲೆಲ್ಲೂ ಹಳೆಯ ಗೆಣೆಯರು
ಪಂಜರದಲ್ಲಿ ಪಶುಗಳೆಡೆಯಾಡುವಂತೆ
ವೇಷ ಪಲ್ಲಟದ ನಾಟಕ
ಮಾಡುತ್ತಾರೆ.
ನಿರ್ಭಯದ ಭಾವಪಲ್ಲಟವು
ಶಾಲೀನತೆಯಿಂದಲಾದರೂ ನಾಚಬೇಕಾಗಿದೆ.
ಬುದ್ಧಿಯ ಅತಿರೇಕ ಬೇಡ.
ಭಾವದ ಅತಿರೇಕ ಬೇಡ,
ಬುದ್ಧಿ ಭಾವದ ಹೊಂದಾಣಿಕೆ
ಆಗದೆ,
ಭವಿಷ್ಯ
ಇಲ್ಲ.

ದ. ರಾ. ಬೇಂದ್ರೆ

ಪಾತ್ರ ಪರಿಚಯ

೧. ಪದ್ಮನಾಭರಾಯರು (ಕೋಲಿನವ)

೨. ಹರಿದಾಸ-ಒಬ್ಬ ಸೇವಾ ನಿವೃತ್ತ ನ್ಯಾಯಾಧಿಕಾರಿ

೩. ವಿಶ್ವಾಸರಾಯರು (ಗಡ್ಡದವ)

೪. ಮಾಯಾತೀತ-ಒಬ್ಬ ಸೇವಾನಿವೃತ್ತ ಪೋಲೀಸ್ ಅಧಿಕಾರಿ

೫. ಸುಂದರಾಬಾಯಿ-ಒಬ್ಬ ಸೇವಾ ನಿವೃತ್ತ ನರ್ಸ್‌ಬಾಯಿ

(ತೆರೆಯೆತ್ತಿದೊಡನೆ ಒಂದು ಬಂಡೆಗಲ್ಲಿನ ಮೇಲೆ ಪೂರ್ವಾಭಿಮುಖನಾಗಿ ಒಬ್ಬನು ಕುಳಿತ ನೋಟ, ದೊಡ್ಡ ಆಳು. ಅದೇ ಕಲ್ಲಿನ ಒಂದು ತುಂಡು ಕೆತ್ತಿ ಮಾಡಿದ ವಿಗ್ರಹದಂತೆ ಅಸಾಧ್ಯ ಕಪ್ಪು ಬಣ್ಣದವನು, ಉತ್ತರದವರಂತೆ ಎತ್ತರವಾಗಿ ತಲೆಗೊಂದು ಉದ್ದೋ ಉದ್ದ ಫೇಟಾ ಸುತ್ತಿಕೊಂಡಂತಿದ್ದಾನೆ. ಕಾಲುದ್ದ ಬಿಳಿಬಣ್ಣದ ನಿಲುವಂಗಿ. ಅವನ ಗಡ್ಡ-ಮೀಸೆಗಳಲ್ಲಿ ಅವನ ಮೂಗು ಗಿಡದ ಗುಂಪಿನಲ್ಲಿ ತಲೆಯೆತ್ತಿದ ಕಲ್ಲುಗುಡ್ಡದ ಚಿತ್ರಾಭಾಸದಂತಿದೆ. ವಿವೇಕಾನಂದರು ಧ್ಯಾನಕ್ಕೆ ಕುಳಿತ ರೀತಿಯಲ್ಲಿ ನೆಟ್ಟಗೆ, ಎದೆಸೆಟಿಸಿ, ತಲೆಬಾಗಿ ಕುಳಿತಿದ್ದಾನೆ. ಪ್ರಾತಃಕಾಲದ ಸೂರ್ಯೋಪಾಸನೆ ಮಾಡುತ್ತಿರಬಹುದು. ಕೆಲಹೊತ್ತಿನ ಮೇಲೆ ಕೈಮುಗಿದು, ಕಣ್ಣುತೆರೆದು, ಸುತ್ತೂ ಕಡೆಗೆ ನೋಡುತ್ತಿರುವಾಗ ಹಿನ್ನೆಲೆಯಲ್ಲಿ ಹಾಡು)

೧

ಗಿಣೀ ಹಣೀಮ್ಯಾಲೆ ಗೆಣೆತಾನ ಬರದಾನ ॥ ಪಲ್ಲವಿ ॥

೨

ಬನಾ ಬನಾ, ಮನೀ ಮನೀ
ಥರಾ ಥರಾ, ಧನಿ ಧನಿ

೩

ರೆಕ್ಕೀ ನೋಡಿಕೊಂಡು
ಹಕ್ಕಿ ಕೂಡತಾವ
ಹಕ್ಕೀಲೆ ಅಕ್ಕಪಕ್ಕ ಸನಿ

೪

ಫಕ್ಕನೆ ಹಾರತಾವ,
ಗಕ್ಕನೆ ಇಳೀತಾವ
ಸಿಕ್ಕಲ್ಲೆ ಕಳೀತಾವ ದಿನಾ
ನೋಡೇನೆ ಈ ಮಂದೀ ನಾ !

ಗಡ್ಡದವ : ಅಹಹಾ ! ಬಣ್ಣ ಬಣ್ಣಗಳೆಲ್ಲ ಒಂದು ಬೆಳಕಿನಲ್ಲಿ ಅಡಗಿ ಹೋದವು. ಹೀಗಿದೆ ಮಾಯೆ! ಈ ಹೊರಗಿನ ಸೂರ್ಯ ಒಳಗೆ ಮೂಡಿದರೆ ಕತ್ತಲು ಹರಿದಂತಾಗುವದು (ಮತ್ತೆ ಕಣ್ಣು

ಮುಚ್ಚಿ ಕುಳಿತು ಬಿಡುವನು). (ಅಷ್ಟರಲ್ಲಿ, ವಯಸ್ಸಿನಿಂದ ಸ್ವಲ್ಪ ಬಾಗಿದ, ನುಣುಪು ತಲೆಯ, ಕೆಂಪು ಬಣ್ಣದ ಗೃಹಸ್ಥನೊಬ್ಬನು ಒಳಗೆ ಹೊದ್ದುಕೊಳ್ಳುವ ಧೋತರ ಹೊದಿಸಿದ ಕೇಸರಿ ಬಣ್ಣದ ಶಾಲೊಂದು ಹೊತ್ತುಕೊಂಡು, ಕೈಯಲ್ಲಿ ಎತ್ತರವಾದ ಊರುಗೋಲಾದ ಗಂಡು-ಬೆತ್ತವನ್ನು ಹಿಡಿದುಕೊಂಡು ಪ್ರವೇಶಿಸುವನು, ಮೀಸೆ ತೆಗೆಸಿರುವದರಿಂದಲೂ, ಹಲ್ಲು ಹಾಕಿಸಿರುವದರಿಂದಲೂ, ಅಂಚಿನ ಧೋತರ ಉಟ್ಟಿರುವದರಿಂದಲೂ ಹೇಗೋ ರೆಷೋಕಿನ ತರುಣಕಳೆ ಮಿಂಚುತ್ತಿದೆ. ಬಂಡೆಗಲ್ಲಿನ ಮೇಲೆ ತುಂಡುಮೂರ್ತಿಯಂತೆ ಕುಳಿತ ಪುರುಷನನ್ನು ನೋಡಿ.............)

ಕೋಲಿನವ : ಹಾಂ! ಇದೇನಿದು, ಹೊಸ ಬಗೆಯ ಬೆದರೋ? ಯಾರೋ ಏನೋ ಮಾಡಿ ಯಾರನ್ನೋ ಇಲ್ಲಿ ಹೀಗೆ ಕೂಡಿಸಿರಬಹುದೋ? ಇಲ್ಲ, ಸ್ವಲ್ಪ ಅಲುಗಾಡುತ್ತಾನೆ. ಮೋರೆಯ ಮೇಲೆ ಕೂದಲುಗಳೇ ಅವು? ನಾನು ಮೋರೆಯೇ ಅಷ್ಟು ದಪ್ಪವಾಗಿದೆಯೆನೋ ಎಂದುಕೊಂಡೆ, ಏನು ಎತ್ತರ, ಏನು ದಪ್ಪ, ಏನು ಅಸಡ್ಡಾಳ! ದೇವರ ಸೃಷ್ಟಿಯಲ್ಲಿ ಇಂಥ ಮೃಗಗಳೂ ಇವೆ. ತಾನೇನು ಚೆಲುವನೆಂದು, ಮುಡಿಮಾಡಿದ ಬಿಳಿ ಬಟ್ಟೆ ತೊಟ್ಟಿರುವನೋ! ಭಗವಂತ! ರೂಪದ ಮೋಹಕತೆಯ ಸವಿಯನ್ನು, ಕಲ್ಲಿನ ಹೊಟ್ಟೆಯಲ್ಲಿಯೂ ನೀರನಿಟ್ಟಂತೆ ಈ ಯಮದೇವರ ವಾಹನದ ಎದೆಯಲ್ಲಿಯೂ ಇಟ್ಟಿರುವಿಯಲ್ಲವೇ? ಆದರೆ......... ಈ ಆಸಾಮಿ ಬೇಗನೆ ಏಳುವ ಲಕ್ಷಣ ತೋರುವದಿಲ್ಲ. ಇನ್ನೊಂದು ಸುತ್ತುಹಾಕಿ ಬರೋಣ. ಅಷ್ಟರಲ್ಲೆದ್ದರೆ ಒಳ್ಳೇದಾದೀತು. (ಧ್ಯಾನಸ್ಥನ ಮುಂದೆ ಹಾಯ್ದು ಹಾಗೇ ಹೋಗುವನು).

ಗಡ್ಡದವ : (ಕಣ್ಣು ತೆರೆದು) ಛೀ, ಛೀ! ಎಲ್ಲ ಕತ್ತಲು. ಯಾವದೂ ಅಸಾಧ್ಯವಲ್ಲ; ನಿಜ. ಆದರೆ ಈ ಮಾತು ಸುಲಭ ಸಾಧ್ಯವೂ ತೋರುವದಿಲ್ಲ. ಹೊರಗಿನ ಸೃಷ್ಟಿಯನ್ನೇ ಕೆಲಹೊತ್ತು ನೋಡಿ

ವ್ಯೆ ಮರೆಯುವದು ಆಗುವದೋ ನೋಡೋಣ. ಏನು ಬಯಲು! ಏನು ಗಿಡಗಳು! ಏನು ಗುಡ್ಡದ ಸಾಲು! ಮೋಡಗಳ ಮಾಯೆ ಅವುಗಳ ತಲೆಯನ್ನೂ ಮುಸುಕಿದೆ. ಒಳಗೆ ಮಾಯೆ, ಹೊರಗೆ ಮಾಯೆ, ಸುತ್ತೂ ಕಡೆಗೆ ಮಾಯೆ. (ಕೋಲಿನವ ಹೋದತ್ತ ದಿಟ್ಟಿಸಿ) ಇವನಾರು? ಮತ್ತೆ ಮತ್ತೆ ಹೊರಳಿ ನೋಡುತ್ತಾನೆ ನನ್ನ ಕಡೆಗೆ. ಈ ಹೊರಳಿ ನೋಡುವ ಚಟವು ಕಡಿಮೆಯಾಗದಿದ್ದರೆ, ಮನುಷ್ಯನ ಪ್ರಗತಿಯೇ ಆಗಲಾರದು. ನಾನೇನು ಹೆಣ್ಣೇ! ಇಲ್ಲ, ತಾನೇ ದೊಡ್ಡ ಕಾಮಣ್ಣನೆಂದು ಮೋರೆತೋರಿಸುತ್ತ ಹೊರಟಿರುವನೋ! ಎಲ್ಲ ವಿಚಿತ್ರ! ಅವನು ಮಂಗನಂತೆ ಮೋರೆ ತಿರುವಾಡಿದರೂ, ನನ್ನ ಮನಸ್ಸೇಕೆ ಅತ್ತ ಹರಿಯಬೇಕು? ''ಚಂಚಲಂ ಹಿ ಮನಃ'' ''ಚಂಚಲಂ ಹಿ ಮನಃ''- ಮಂಗನ ಕೂಡ ಮಂಗನಾಯಿತು ಮನಸ್ಸು. 'ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡಲಿಲ್ಲ' ಎಂಬಂತೆ ಊರ ಹೊರಗೆ ಬಂದರೂ, ಮನುಷ್ಯರ ಸುಳಿದಾಟವಿದ್ದೇ ಇದೆ ಇಲ್ಲಿ. ಬೇಡ ಬೇಡ, ಈ ವಿಚಾರಗಳು. ''ಯೋಗಶ್ಚಿತ್ತವೃತ್ತಿ ನಿರೋಧಃ'', ''ಶಿವೋ ಹಂ ಶಿವೋಹಂ ಶಿವಃ ಕೇವಲೋಹಂ'' (ಕಣ್ಣು ಮುಚ್ಚಿಕೊಂಡು ಕೂಡ್ರುವನು. ಕೋಲಿನವನು ಬರುವನು).

ಕೋಲಿನವ : ಇವನಿಗೇನು ಸ್ತಂಭರೋಗಗೀಗ ಇದೆಯೋ ಏನು? ಅಲ್ಲ, ಆಗಳೆ ಮೋಡದೊಳಗಿಂದ ಮಿಂಚಿದಂತೆ, ಇವನ ಹುಬ್ಬು ಮೀಸೆಗಳೊಳಗಿಂದ ದೃಷ್ಟಿ ಮಿಂಚಿತ್ತು. ಮತ್ತೆ ಕಣ್ಣು ಮುಚ್ಚಿದ್ದಾನೆ. ಏನು ಪ್ರಾಯೋಪವೇಶನಕ್ಕೆ ಕುಳಿತಿರುಬಹುದೇ? ಏನೇ ಇದ್ದರೂ, ಅಡ್ಡಾಡುವವರಿಗೆ ಅಪಶಕುನವಾಗಬಾರದೆಂದಾದರೂ, ಹಾದಿಬಿಟ್ಟು ಮಂದಿಯ ಕಣ್ಮರೆಗೆ ಕೂಡಬಾರದಿತ್ತೇ ಪ್ರಾಣಿ! ಪ್ರಾತಃಕಾಲದ ಪ್ರಾಣವಾಯುವನ್ನು ಮನದಣಿಯೆ ಉಸುರಾಡಿಸಿ

ಹೋಗಬೇಕೆಂದು ಬಂದರೆ, ಎಲ್ಲಕ್ಕೂ ಮೇಲು ನಾನು ಎನ್ನುವವನಂತೆ ಅಟ್ಟದ ಮೇಲೆ ಏರಿ ಕುಳಿತಿದ್ದಾನೆ. ಕಣ್ಣು ಮುಚ್ಚಿ ಕೂಡ್ರುವವರಿಗೆ ಬೆಳಕೇಕೆ ಬೇಕೋ! ಯಾವದಾದರೂ ಗವಿಯಲ್ಲಿ ಸೇರಿಕೊಂಡಿದ್ದರಾಗುವದಿಲ್ಲವೇ? ಅದು ಹೇಗಾದೀತು? ಜನರು ನೋಡಬೇಕಲ್ಲ! ಜಂಭ, ಜಂಭ, ಜಂಭ, ಬರಿಯ ಜಂಭ. ಇನ್ನೊಂದು ಸುತ್ತು ಹಾಕಿ ಬರುತ್ತೇನೆ. ಅಷ್ಟರಲ್ಲೆದ್ದರೆ, ಇಲ್ಲಿ ಒಂದು ಗಳಿಗೆ ಕೂತು, ಹರಿ ಹರಿ ಎಂದು ಹೋಗೋಣ. ಇಲ್ಲದಿದ್ದರೆ ಶಪಿಸಿ, ಮನೆಯ ಹಾದಿ ಹಿಡಿಯೋಣ. (ಮುಂದೆ ಹಾಯ್ದು ಹೋಗುತ್ತಾನೆ)

ಗಡ್ಡದವ : (ಕಣ್ಣು ತೆರೆದು) ''ಮನವೆಂಬ ಮರ್ಕಟವ ತಡೆಯಲಾರೆನು ದೇವ'' - ತಡೆಯಲಾರೆನು ದೇವ, ತಡೆಯಲಾರೆನು. ದೇವ ದೇವ ದೇವ! ಹಾಗೇ ಟೊಂಗೆ ಟೊಂಗೆ ಜಿಗಿದಾಡುತ್ತಿದೆ. ಆ ವಿಷಯ ಬಿಟ್ಟರೆ ಈ ವಿಷಯ; ಈ ವಿಷಯ ಬಿಟ್ಟರೆ ಆ ವಿಷಯ. ಏನು ಮಾಡಬೇಕು? ''ವಿಷಯಾನ್ ಇಂದ್ರಿಯೈಶ್ಚರನ್'' ಮಾಡಿ ನೋಡೋಣ. (ಅತ್ತಿತ್ತ ನೋಡುವನು) ಅಬ್ಬಾ! ಇನ್ನೂ ಅಲ್ಲಿಯೇ ಇದ್ದಾನಲ್ಲ ಆ ಮಂಗಮೂರ್ತಿ. ಏನು ಅಲ್ಲಿಯೇ ಗಕ್ಕನೆ ನಿಂತಿದ್ದಾನೋ? ನಾನು ಯಾವನೋ ಋಷಿಯೆಂದು ತಿಳಿದು ದೂರಿಂದಲೇ ಪ್ರದಕ್ಷಿಣೆ ಹಾಕುತ್ತಾನೋ? ಹೌದೇ, ಮತ್ತೆ ನನ್ನ ಕಡೆಗೆ ನೋಡುತ್ತಾನೆ. ಹಲ್ಲೇನು ಕಿಸಿಯುತ್ತಿದ್ದಾನೆ? ಶುದ್ಧ ಕೆಂಪು ಮಂಗ! ಮಂಗ.....ಮಂಗ..... ಅವನೇನೆ ಇರಲಿ. ನಾನೇಕೆ ಅತ್ತ ಕಡೆಗೆ ನೋಡಬೇಕು? ಇನ್ನೊಮ್ಮೆ ಕಣ್ಣು ಮುಚ್ಚಿಯೇ ಮನಸ್ಸು ಸ್ಥಿರ ಮಾಡುತ್ತೇನೆ.

(ಇವನು ಕಣ್ಣು ಮುಚ್ಚುವನು, ಕೋಲಿನವನು ಬರುವನು)

ಕೋಲಿನವ : ಈ ವ್ಯಕ್ತಿಯು ಪರೀಕ್ಷೆ ಮಾಡದೆ ಹೋಗಬಾರದು, ಈ ಹೊತ್ತು. ಈ ಹಾದಿಯ ಮೇಲೆ ಇವನನ್ನು ಹಾಯ್ದಾಡುವಾಗ ಎಂದೂ ನೋಡಿಲ್ಲ. ಏನೋ ಹೊಸಬನಿರಬೇಕು. ಪರಊರಿಗೆ ಬಂದಿದ್ದಾನೆ. ರಾತ್ರಿಯಲ್ಲಿ ಹಾದಿ ನಡೆದು ದಣಿದಿದ್ದಾನೋ ಏನೋ! ಭಕ್ಷ್ಯ ಸಿಕ್ಕಿರಲಿಕ್ಕಿಲ್ಲ ಈ ಬಾವಾಜಿಗೆ..... ಮಾತಾಡಿಸುವದು ಹೇಗೆ? ದೂರಿಂದ ನಾನೂ ಅವನನ್ನು ನೋಡಿದ್ದೇನೆ; ಅವನು ನನ್ನನ್ನು ನೋಡಿರಬೇಕು. ಹತ್ತಿರ ಬಂದಾಗ ಕಣ್ಣು ಮುಚ್ಚಿರುತ್ತಾನೆ. ದೃಷ್ಟಾದೃಷ್ಟಿ, ಆದರೆ ಗುರುತಾಗಬೇಕು. ಏನು ದೃಷ್ಟಿಯಾದೀತೆಂದೇ ಬೇಕೆಂತಲೆ ಕಣ್ಣು ಮುಚ್ಚಿಕೊಳ್ಳುತ್ತಾನೋ? ಈ ಕಣ್ಣಮುಚ್ಚಣಿಕೆ ಆಟವನ್ನೇಕೆ ನಡೆಸಿದ್ದಾನೆ? ಇನ್ನು ಹೀಗೆ ಮಾಡಬೇಕು. ಸಮೀಪ ಹಾಯ್ದು ಹೋಗುತ್ತ ಹೋಗುತ್ತ, ಕೈಕೋಲನ್ನು ಅವನ ಮೈಮೇಲೆ ಬೀಳುವಂತೆ ಬಿಟ್ಟುಬಿಡಬೇಕು. ಎಚ್ಚರವಾಗದೇ ಏನು ಮಾಡುತ್ತಾನೆ?.......... ವಸಕ್ಕನೆ ಎದ್ದು ಮೈಮೇಲೆ ಬಂದರೆ ಹೇಗೆ? ಗಸಕ್ಕನೆ ಹೋಗಿ ಆ ಬಂಡೆಗಲ್ಲ ಮೇಲೆ ಕುಳಿತು ಬಿಡೋಣ. ಆಮೇಲೆ ಮುಂದಿನ ಮಾತು. (ಹಂಚಿಕೆಯಂತೆಯೇ ಮೆಲ್ಲಗೆ ಹತ್ತಿರ ಹೋಗಿ ಕೈಕೋಲನ್ನು ಅವನ ಮೈಮೇಲೆ ಬಿಡುವನು. ಗಡ್ಡದವನು ಟಣ್ಣನೆ ಕೆಳಗಿಳಿದು......)

ಗಡ್ಡದವ : ಯಾರವರು? ಏನದು? (ಎಂದು ಜೀಪುಗಾಲಿನಿಂದ ಯುದ್ಧ ವೀರನ ಭಂಗಿಯಲ್ಲಿ ನಿಲ್ಲುವನು. ಕೋಲಿನವನು ಬಂಡೆಗಲ್ಲು ಹತ್ತಿ ಕುಳಿತು......)

ಕೋಲಿನವ : ಏನು ಬಾವಾಜಿ.........

ಗಡ್ಡದವ : ಯಾಕೆ ಮೊವಾಜೀ.........

ಕೋಲಿನವ : ಸಂಬಂಧವನ್ನೇ ಹಚ್ಚಿದಿರಲ್ಲ! ಎಲ್ಲಿಂದ ಬರೋಣವಾಯಿತು? ಬರ್ರಿ. ಮೇಲೆ ಕೂಡ ಬರ್ರಿ. ಊರಹೊರಗಿನ ಬಂಡೆಗಲ್ಲು

ಯಾರಪ್ಪನ ಮನೆಯದಲ್ಲ. ನೀವೂ ಕುಳಿತುಕೊಳ್ಳಿರಿ. ನಾವೂ ಕುಳಿತುಕೊಂಡಿದ್ದೇವೆ.

ಗಡ್ಡದವ : (ಕೋಲಿಗೆ ಕೈ ಹಚ್ಚಿ) ಕೋಲೆತ್ತಲೇನು? ನನ್ನ ಮೈಮೇಲೇಕೆ ಒಗೆದಿರಿ ಕೋಲನ್ನು?

ಕೋಲಿನವ : ಕೋಲು ಕೆಳಗೇ ಇರಲಿ. ಹೋಗುವಾಗ ಹಿಡಕೊಂಡು ಹೋಗುತ್ತೇನೆ. ನಾನೇನು ಕೋಲು ಒಗೆಯಲಿಲ್ಲ. ಹೀಗಿಟ್ಟು ಹತ್ತುವಾಗ, ಏನೋ ತಾನೇ ಬಿತ್ತು. ಅದಿರಲಿ ಬಾವಾಜೀ! ಈ ಊರಲ್ಲಿ ಎಲ್ಲಿ ಮುಕ್ಕಾಮು?

ಗಡ್ಡದವ : ಮತ್ತೆ ಮತ್ತೆ ಬಾವಾಜೀ ಎನ್ನಬೇಡಿರಿ. ನಾನು ಯಾರೆಂದು ತಿಳಿದಿರಿ? ಅಲ್ಲ, ನಿಮ್ಮ ಕೈಗೆ ಕೋಲು ಬಂದು ಹತ್ತು ವರ್ಷವಾಗಿರಬಹುದು. ರೀತಿ ನಡತೆ ತಿಳಿಯಬಾರದೇ? ಮಂಗನಂತೇನು ಹಲ್ಲು ಕಿಸಿಯುತ್ತೀರಿ?

ಕೋಲಿನವ : ನಿಮ್ಮ ಗಡ್ಡಕ್ಕೇ ನಲವತ್ತು ವರ್ಷಗಳಾಗಿರಬೇಕು, ನಿಮಗಿನ್ನೂ ತಾಳ್ಮೆ ಬಂದಿಲ್ಲ. ಬಾವಾಜಿ.....ಹೌದು ಬಾವಾಜೀ! ಅಲ್ಲ ಬಾವಾಜೀ! ಬಾವಾಜಿ ಅಲ್ಲ, ನೀವಾರು? ಎಂದೆ. ತಾವೇ ಹೋಳೋಣಾಗಲಿ, ತಮ್ಮ ಕಫನಿ, ತಮ್ಮ ಪೇಟಾ, ತಮ್ಮ ಗಡ್ಡ ನೋಡಿದರೆ ತಾವು ಯಾರೋ ದೊಡ್ಡ ಸಾಧು ಬಾವಾಜಿಗಳಾಗಿರಬೇಕೆಂದು ನನಗೆ ಭ್ರಮೆಯಾಗಿ ಹಾಗೆಂದೆ. ತಮ್ಮ ಮಾತು ಕೇಳಿದ ಮೇಲೆ ತಮ್ಮ ಕಫನಿ ಹಾಗೇ ಹೊಲಿಸಿದ್ದೂ, ಪೇಟಾ ಸುಮ್ಮನೇ ಸುತ್ತಿದ್ದೂ, ಗಡ್ಡ ತಾವೇ ಬೆಳೆದಿದ್ದೂ ಇರಬೇಕು ಎಂದು ಈಗ ಪೂರ್ಣ ಮನವರಿಕೆಯಾಯಿತು. ಬರ್ರಿ, ಮೇಲೆ ಬರ್ರಿ. ಇಬ್ಬರೂ ಲೌಕಿಕರು ಅಂದಂತಾಯಿತು. ಇನ್ನು ಯಾಕೆ ಸಿಟ್ಟು ಸೆಡವು? ನಾನು ಮೊದಲು ಯಾವ ಮಹಾತಪಸ್ವಿಯ ತಪ್ಪಾಯಿತೋ

ಎಂದು ಮನಸ್ಸಿನೊಳಗೇ ಸ್ವಲ್ಪ ಬೆದರಿದ್ದೆ. ಆದದ್ದು ಆಗಿಹೋಯಿತಲ್ಲ. ಇನ್ನೂ ಸಿಟ್ಟೇ? ಕ್ಷಮಿಸಿಬಿಡಿರಿ. ಆಯಿತೋ ಇಲ್ಲೋ?

ಗಡ್ಡದವ : ಅಲ್ಲ, ಎಷ್ಟು ಉದ್ದುದ್ದ ಮಾತಾಡುತ್ತಿರಿ. ನಿಮ್ಮ ಉದ್ದ ಕೈಕೋಲಿಗಿಂತ ಮೊಳ ಉದ್ದ ಎತ್ತರವಿದ್ದು. ಉದ್ದನ್ನವರಿಗೆ ಬುದ್ಧಿ.........

ಕೋಲಿನವ : ಇದು ನೋಡಿರಿ. ನಾನು ನಿಮಗೆ ನಿಮ್ಮ ಸುತ್ತಳತೆಯನ್ನು ಹೇಳಬೇಕಾದೀತು. ಅದಕ್ಕೆ ನಿಮ್ಮ ಪೇಟಾ ಬಿಚ್ಚಿ ನೋಡಬೇಕಾದೀತು. ಅದೆಲ್ಲ ಮಾತೇಕೆ? ಪ್ರಾತಃಕಾಲದಲ್ಲಿ ಸುಮ್ಮನೆ ಹರಿ ಹರಿಯೆಂದು.........

ಗಡ್ಡದವ : ಅಬ್ಬ, ಮುಪ್ಪಾಗಿಯೂ ಹುಡುಗಾಟ ಹೋಗಲಿಲ್ಲ. ಮೇಲೆ ಬ್ರಹ್ಮಜ್ಞಾನ ಬೇರೆ. ಈ ಢೋಂಗು ನನ್ನ ಮುಂದೆ ನಡೆಯುವಂತಿಲ್ಲ. ನಾನು ಯಾರು ಗೊತ್ತಿದೆಯೇನು?

ಕೋಲಿನವ : ಆಗಲೆ ಕೇಳಿದ್ದೆನಲ್ಲ 'ಯಾರು' ಎಂದು. ಹೇಳಿಬಿಡಿರೊಮ್ಮೆ. ಮತ್ತೆ ಮತ್ತೆ ಅದೇ ಪ್ರಶ್ನೆ ಕೇಳಿ ಯಾಕೆ ದಣಿಯುತ್ತೀರಿ? ನೀವು ಮತ್ತೆ ಹೀಗೆ ಹತ್ತು ಸಲ ಕೇಳಿದರೂ ನನಗೆ ಉತ್ತರ ಗೊತ್ತಿಲ್ಲ. ನಾನೇನು ಪ್ರಶ್ನೆ ಹೇಳುವ ಫಲ ಜ್ಯೋತಿಷಿಯಲ್ಲ. ಬರ್ರಿ, ಮೇಲೆ ಬಂದು ಕುಳಿತು ಹೇಳಿರಿ. ಇಂಥ ದೇಹ ಹೊತ್ತು ಎಷ್ಟು ಹೊತ್ತು ನೀವಾದರೂ ನಿಂತೀರಿ? (ಗಡ್ಡದವನು ಮೇಲೆ ಹತ್ತಿ ಕುಳಿತುಕೊಂಡು ಕೋಲಿನವನ ದೃಷ್ಟಿಗೆ ದೃಷ್ಟಿ ಹಚ್ಚಿ............)

ಗಡ್ಡದವ : ನಾನಾರು ಗೊತ್ತಾಯಿತೇ?

ಕೋಲಿನವ : ಹೂಂ, ಮುಂದೆ ಸಾಗಲಿ ಗಾಡಿ.

ಗಡ್ಡದವ : ನಾನು ರಿಟಾಯರ್ಡ್-ಪೋಲೀಸ್-ಸಬ್-ಇನ್‌ಸ್ಪೆಕ್ಟರ್......

ಕೋಲಿನವ : ತಿಳೀತು, ಪೂರ್ಣ ತಿಳೀತು ! ಇನ್ನು ನಾಸಾರು ಹೇಳಲೇನು ಸ್ವಲ್ಪ....... ನಾನು ರಿಟಾಯರ್ಡ್-ಸಬ್ ಜಜ್.

ಇನ್‌ಸ್ಪೆಕ್ಟರ್ : ಅಲ್ಲರೀ, ನಿಮ್ಮನ್ನೆಲ್ಲೋ ನೋಡಿದಂತಿದೆ.........

ಜಜ್ : ನಿಮ್ಮೆದುರಿನಿಂದ ಎರಡು ಸಲ ಹಾದು ಹೋದೆ. ನಡುವೇ ಮೆಲ್ಲಗೆ ಕಣ್ಣು ತೆಗೆದು ನೋಡಿರಬಹುದು ನನ್ನನ್ನು.

ಇನ್‌ಸ್ಪೆಕ್ಟರ್ : ಛೀ, ಹಾಗಲ್ಲ. ಹಿಂದೆ ಎಲ್ಲೋ ನೋಡಿದ್ದೇನೆ.

ಜಜ್ : ಭಾಸ, ಬರಿಭಾಸ. ನನಗೂ ನಿಮ್ಮನ್ನು ನೋಡಿದಂತೆ ಎನಿಸಹತ್ತಿದೆ. ಅನೇಕ ಪಟ್ಟಣಗಳಲ್ಲಡ್ಡಾಡಿದ್ದರಿಂದ, ಒಂದರಂತೆ ಒಂದು ಮುಖ ಕಾಣುವದೇನೂ ಅಸಂಭವವಲ್ಲ.

ಇನ್‌ಸ್ಪೆಕ್ಟರ್ : ಅಲ್ಲ ತಮ್ಮ ಹೆಸರೇನು ಹೇಳಿರಿ..........

ಜಜ್ : ಹಳೆಯ ಹೆಸರು ತೆಗೆದುಕೊಂಡು ಏನು ಮಾಡುತ್ತೀರಿ ? ಹಿಂದೆ ಹೋದಷ್ಟು ದಿವಸ ಮುಂದಿಲ್ಲ, ಹಿಂದಿದ್ದ ಅಧಿಕಾರ ಇಂದಿಲ್ಲ. ಹಿಂದಿನ ಹೆಸರಿನ ಗೊಂದಲ ಇಂದೇಕೆ ಮತ್ತೆ?

ಇನ್‌ಸ್ಪೆಕ್ಟರ್ : ಇಲ್ಲ, ಒಬ್ಬರನ್ನೊಬ್ಬರು ಟಕಮಕ ನೋಡುವದೆಷ್ಟು ಹೊತ್ತು? ಒಂದೇ ಕಲ್ಲಿನ ಮೇಲೆ ಕುಳಿತಿದ್ದೇವೆ. ಎಷ್ಟೋ ಹತ್ತಿರ ಬಂದಂತಾಯಿತು. ಹೆಸರಷ್ಟು ಗೊತ್ತಾಯಿತೆಂದರೆ ಅಷ್ಟೇ ಪರಿಚಯ ಹೆಚ್ಚು. ಹೆಸರೇನು ?

ಜಜ್ : ತಮ್ಮ ಹೆಸರೇನು, ಹಾಗಾದರೆ....?

ಇನ್‌ಸ್ಪೆಕ್ಟರ್ : ನನ್ನದೇ ? ನನ್ನದು........ನನ್ನದು......'ಮಯಾತೀತ' !

ಜಜ್ : 'ಮಾಯಾತೀತ'? ಇದೇನು ಪೋಲೀಸ್ ಸಬ್-ಇನ್ಸ್ಪೆಕ್ಟರರ ಹೆಸರಾಯಿತೇನು ? 'ಮಾಯಾತೀತ' ಒಂದು ಬಾವಾಜೀ ಹೆಸರಿದ್ದಂತಿದೆ.

ಇನ್‌ಸ್ಪೆಕ್ಟರ್ : ಆಯಿತು, ಸರಿಹೋಯಿತಲ್ಲ. ರೂಪಕ್ಕೂ ಹೆಸರಿಗೂ ಹೊಂದಿಕೆ ಯಾದರಾಯಿತು. ನಾವು, ರೂಪ ಎರಡೂ ಮಿಥ್ಯ. ಬಾವಾಜಿಯಂತೆ ಕಾಣುತ್ತೇನೆ, ಬಾವಾಜಿಯಂತೆಯೇ ಹೆಸರಿದೆ. ಕಾಣುವದು ಕೇಳುವದು ಮಿಥ್ಯ. ''ಯುದ್ದೃಷ್ಟಂ ತನ್ನಷ್ಟಂ'' ವಸ್ತು ಬೇರೇಯೇ ಇದೆ. ಇನ್ನು ತಮ್ಮ ಹೆಸರೇನು?

ಜಜ್ : ನನ್ನದು....ಹರಿದಾಸ. ಜನರೂ ಹಾಗೇ ಎನ್ನುತ್ತಾರೆ ಎನ್ನಿರಿ.

ಮಾಯಾತೀತ : ಅಲ್ಲ, ಇದೇನು ಸಬ್‌ಜಜ್ಜರ ಹೆಸರಾಯಿತೇನು ?

ಹರಿದಾಸ : ಲೌಕಿಕ ಕಾರ್ಯ ನಡೆದಾಗ ಲೌಕಿಕ ಹೆಸರು. ಜೀವವು-ಸಾತ್ವಿಕಜೀವವು- ಹರಿಯ ದಾಸನಾಗಿಯೇ ಇದೆ. ಅದರ ಮೂಲ ಹೆಸರು ಹರಿದಾಸ ಎಂದೇ ಇರಬೇಕು. ಉಳಿದ ಹೆಸರು ತದರ್ಥದಿಂದ ನಿಜವಾಗಿದೆ.

ಮಾಯಾತೀತ: ಹಾಗಾದರೆ ಹೇಸರೇಕೆ ಬದಲು ಮಾಡಿಕೊಂಡಿರುವಿರಿ ? ಇದರ ತಾತ್ಪರ್ಯವೇನು ?

ಹರಿದಾಸ : ಎಲ್ಲವೂ ಬದಲಾಗುತ್ತಿದೆ. 'ಯತ್ಕಿಂಚ ಜಗತ್ಯಾಂ ಜಗತ್' ಆಶ್ರಮ ಬದಲು, ರೂಪ ಬದಲು, ಆವರಣಗಳು ಬದಲು, ಹೆಸರು ಬದಲು.

ಮಾಯಾತೀತ : ಅಲ್ಲರೀ, ಈ ತಮ್ಮ ಹಲ್ಲು, ಹುಟ್ಟಿದ ಹಲ್ಲೋ ? ಕಟ್ಟಿದ ಹಲ್ಲೋ ?

ಹರಿದಾಸ : ಅದೇತಕ್ಕೆ ಬೇಕು ?

ಮಾಯಾತೀತ: ಇಲ್ಲ, ಕನಸಿನೊಳಗಿನ ರೂಪ ಮನಸಿನೊಳಗೆ ಬಂದು ಮಾಯವಾಗುವಂತೆ, ನಿಮ್ಮ ಮುಖ ಎಲ್ಲೋ ನೆನಪಿನೊಳಗೆ ಸುಳಿದು.........ಸುಮ್ಮನೇ ಕೇಳುತ್ತೇನೆ; ತಾವು ಮೀಸೆಗಳನ್ನೂ ಇತ್ತೀಚೆ ತೆಗೆಸಿರುವಿರಷ್ಟೇ ?

ಹರಿದಾಸ : ತಾವು ನಾಮ ರೂಪ ಸುಳ್ಳು ಎನ್ನುತ್ತ ಎನ್ನುತ್ತ, ಬಹಳೇ ಚಿಕಿತ್ಸೆ ನಡಿಸಿದಿರಿ. ಆ ಪ್ರಾಯ, ಆ ಮೀಸೆ, ಒಂದರ ಕೂಡೊಂದು ಹೋದವು.

ಮಾಯಾತೀತ : ತಮ್ಮ ಮುಖ ಒಮ್ಮೆ ಹೊಸ ಮುಖದಂತೆ ಕಾಣುವದು. ಒಮ್ಮೆ ಹಳೆಯ ಮುಖದಂತೆ ಹೊಳೆಯುವದು.

ಹರಿದಾಸ : ನಾನೂ ತಮ್ಮ ಮುಖ ಲಕ್ಷಣಗಳ ವಿಮರ್ಶೆ ನಡೆಸಬಹುದಾಗಿತ್ತು, ಆದರೇನು, ಅಡವಿ ಬೆಳೆದು ಅಡಗಿ ಹೋದ ಹಳೆ ಪಟ್ಟಣದಂತೆ, ತಮ್ಮ ಗುರುತು ಹೇಳುವದು, ದೊಡ್ಡ ಸಂಶೋಧನೆಯ ಕೆಲಸವಾಗಿದೆ.

ಮಾಯಾತೀತ : ಹೌದರೀ ಹೌದು, ತಾವು ಒಮ್ಮೆ ಗೋವಾದಲ್ಲಿ ಭೆಟ್ಟಿಯಾದಂತಿತ್ತು.

ಹರಿದಾಸ : ಇದ್ದೀತು, ನಮ್ಮ ಮಿತ್ರರೊಬ್ಬರೊಡನೆ ಮಂಗೇಶಿ ದೇವಸ್ಥಾನ ನೋಡಲಿಕ್ಕೆ ಹೋಗಿದ್ದೆ. ಅದಕ್ಕೆ ಬಹಳ ವರ್ಷಗಳಾದವು. ತಾವೇಕೆ ಹೋಗಿದ್ದಿರಿ ಗೋವೆಗೆ ?

ಮಾಯಾತೀತ : ನಾನೋ ದೂಧ್‌ಸಾಗರ, ಅರಬ್ಬಿ ಸಮುದ್ರ, ನೋಡಲಿಕ್ಕೆ ಹೋಗಿದ್ದೆ.

ಹರಿದಾಸ : ತಮಗೆ ಪ್ರಕೃತಿಯ ಮೇಲೆ ಬಹಳ ಪ್ರೀತಿ ಕಾಣುತ್ತದೆ.

ಮಾಯಾತೀತ : ಪ್ರಕೃತಿಯ ಮೀರಿ ಪುರುಷನನ್ನು ನೋಡಬೇಕಾದರೆ, ಸೃಷ್ಟಿ-ಸೌಂದರ್ಯಕ್ಕೇ ಹೋಗಬೇಕು. ಸೃಷ್ಟಿಯ ಸಾನ್ನಿಧ್ಯದಲ್ಲಿ ಅನಾದ್ಯನಂತನಾದ ಪುರಾತನ ಸನಾತನ............

ಹರಿದಾಸ : ಹೌದು. ನನಗೂ ಹೊಳೆಯಿತು. ನೀವು ಹಿಂದೊಮ್ಮೆ ಎಲ್ಲವ್ವನ ಗುಡ್ಡಕ್ಕೆ ಬಂದಿದ್ದಿಲ್ಲವೇ ?

ಮಾಯಾತೀತ: ಪೋಲೀಸರ ಕೆಲಸ ಎಂದರೆ ಗುಡ್ಡಾ-ಕೊಳ್ಳಾ, ಕಾಡು-ಅಡವಿ ಎಲ್ಲಾ ಅಡ್ಡಾಡಬೇಕು. ತಾವೇಕೆ ಹೋಗಿದ್ದಿರಿ ಎಲ್ಲವ್ವನ ಗುಡ್ಡಕ್ಕೆ ?

ಹರಿದಾಸ : ಅದು ನಮ್ಮ ಕುಲದೇವರು !

ಮಾತಾತೀತ : ಒಳ್ಳೇ ಕುಲದೇವರು !

ಹರಿದಾಸ : ಕುಲಕ್ಕೆ ಬಂದದ್ದು ಕುಲದೇವರು. ನಿಮಗೇಕೆ ಸಿಟ್ಟು?

ಮಾತಾತೀತ : ಓಹೋ ಈಗ ಚೆನ್ನಾಗಿ ನೆನಪಾಯಿತು. ತಾವೊಮ್ಮೆ - ಬಹಳ ವರ್ಷದ ಮಾತು ಅನ್ನಿರಿ-ತಾವು ಹೀಗೊಬ್ಬರ ಜೊತೆಯಲ್ಲಿ ಜೇಜೂರಿ ಖಂಡೋಬನಿಗೆ ಬಂದಿದ್ದಿಲ್ಲವೇ? ಆ ಕುಣಿತ, ಹಾಡು, ಭಂಡಾರ..........

ಹರಿದಾಸ : ಛೀ, ನನಗೇನೂ ನೆನಪಿಲ್ಲ, ಆ ಪ್ರಾಂತದಲ್ಲಿ ಕೆಲಸವಿದ್ದಾಗ ಹೋಗಿದ್ದರೆ ಹೋಗಿರಬಹುದು. ತಾವು ಪೋಲೀಸರ ಕೆಲಸ ಬಿಟ್ಟರೂ, ಇನ್ನೂ ಆ ಕಾರಭಾರ ಮಾತ್ರ ಬಿಟ್ಟಿಲ್ಲ. ಎಲ್ಲೆಲ್ಲೋ ಏನೇನೋ ಗಂಟು ಹಾಕಿ ಏನೋ ಕೇಳುತ್ತಾ ಇದ್ದೀರಿ. ಇಲ್ಲದ ಕೆಲಸ. ಕುಣಿತ, ಹಾಡು, ಭಂಡಾರ-ಬಹಳ ಸೂಕ್ಷ್ಮ ನೆನಪಿದೆ ನಿಮಗೆ. ನೀವಾವ ಕೆಲಸಕ್ಕೆ ಅಲ್ಲಿ ಹೋಗಿದ್ದಿರಿ, ಮಾಯಾತೀತರೆ ?

ಮಾಯಾತೀತ: ಹರಿದಾಸರೇ ! ಒಂದು ಗುನ್ಹೆ ತಪಾಸಿಗೆ ಹೋಗಿದ್ದೆ. ಇನ್ನೊಂದೆ ಮಾತು. ತಾವು ಪಂಢರಪುರಕ್ಕೆ ಒಮ್ಮೆ................

ಹರಿದಾಸ : ಪಂಢರಪುರಕ್ಕೆ ಒಮ್ಮೆ ಏಕೆ, ಹತ್ತು ಸಲ ಹೋಗಿದ್ದೇನೆ. ಯಾರಪ್ಪನ ಅಂಜಿಕೆಯೇನು ? ನಮ್ಮಪ್ಪ ವಿಠ್ಠಪ್ಪ ! ಎಲ್ಲ ಭಕ್ತರನ್ನು

ಬರಮಾಡಿಕೊಳ್ಳಲಿಕ್ಕೆ ಸಿದ್ಧನಿದ್ದಮೇಲೆ ಯಾಕೆ ಹೋಗಬಾರದು ?

ಮಾಯಾತೀತ : ಈಗ ಸರಿಯಾಯ್ತು. ಆ ಸುಂದರಾಬಾಯಿ..........

ಹರಿದಾಸ : ಏನು ಸುಂದರಾಬಾಯಿ ! ಬಾಯಿ ಏನು ತೆರೀತೀರಿ ? ಹೆಸರು ಕೇಳಿದರೆ ಮಾಯಾತೀತ; ಹೆಂಗಸರ ಹೊರ್ತು ಮಾತಿಲ್ಲ. ಯಾರದೋ ನೆನಪು ತಂದು ಯಾವದೋ ಮಾರಿಗೆ ಕಟ್ಟುತ್ತಿದ್ದೀರಿ. ಹೇಳಿರಿ ನೋಡೋಣ ನನ್ನ ಹೆಸರು ನೆನಪಿದ್ದರೆ............

ಮಾಯಾತೀತ : ....ಪ ಪ-ಪ-ಪುರುಷೋತ್ತಮ.

ಹರಿದಾಸ : ತಲೀ ಬೋಳಿಸಿತು. ಪ......ಪ್ಪ......ಪುರುಷೋತ್ತಮ. ನಿಮಗೆ ಪುರುಷ-ಸ್ತ್ರೀ ಎರಡೇ ಗೊತ್ತಿವೆ. ದೂರಿಂದ ನೋಡಿ ಯಾರೋ ಹೆಂಗಸರು ಎಂದು ತಿಳಿದುಕೊಂಡಿರೇನು ನನಗೆ ? ಅಂತೆಯೇ ನೋಡುತ್ತಿದ್ದಿರೇನೋ ಮುಚ್ಚಿದ್ದ ಕಣ್ಣು, ಕದ್ದು ಕದ್ದು ತೆರೆದು. ನಿಜವಾಗಿ ಹೇಳಲಾ ? ಈ ಬಂಡೆಗಲ್ಲಿನ ಮೇಲೆ ಕುಳಿತು ನೀವು ಬಕಧ್ಯಾನ ನಡೆಸಿರಬೇಕೆಂದು ಸಂಶಯ ಬಂದೇ, ನಾನು ನಿಮ್ಮನ್ನು ಬಡೆದೆಬ್ಬಿಸಬೇಕೆಂದು ಬಂದೆ. ಯಾರಿಗಾಗಿ ಹೊಂಚುಹಾಕಿ ಕುಳಿತಿದ್ದಿರಿ ಇಲ್ಲಿ? ವೇಷ ಚೆನ್ನಾಗಿ ಹಾಕಿದ್ದೀರಲ್ಲಾ ಮರುಳರನ್ನು ಬಲಿ ಹಾಕಲಿಕ್ಕೆ !

ಮಾಯಾತೀತ : ಸುಳ್ಳು ಸಾಕ್ಷಿದಾರರ ಸಾಕ್ಷಿ ಕೇಳಿ ಕೇಳಿ, ನ್ಯಾಯಾನ್ಯಾಯದ ಕಲಬೆರಿಕೆ ಮಾಡಲಿಕ್ಕೆ ನೀವು ಚೆನ್ನಾಗಿ ಕಲಿತಿದ್ದೀರಿ. ಅಲ್ಲ, ಆ ಸುಂದರಾಬಾಯಿ ಡೊಳ್ಳು ಹೊಟ್ಟೆ, ಪೊಳ್ಳು ಮೈ, ಗುಳ್ಳ ಗಣ್ಣು, ಅಡಿಕೆ ತುರುಬು.......

ಹರಿದಾಸ : ಸರಿ, ಸರಿ, ಸರಿ, ನಿಮ್ಮ ಮೇಲೆ ಒಂದು ಫಿರ್ಯಾದು

ಬಂದಿತ್ತು; ಆ ಸುಂದರಾಬಾಯಿಯ ಸಲುವಾಗಿ; ನಿಮ್ಮ ಹೆಸರು ವಿಶ್ವಾಸರಯರು.... ಹೌದೋ ಅಲ್ಲವೋ ?

ವಿಶ್ವಾಸರಾಯ: ಹೌದು. ತಮ್ಮ ಹೆಸರು ಪದ್ಮನಾಭರಾಯರು, ರತ್ನಾಗಿರಿಯಲ್ಲಿದ್ದಿರಿ. ನಿಮ್ಮ ಬಗ್ಗೆ ಬಹಳೇ ಬೊಬ್ಬಾಟ ಮಾಡಿದಳು ಆ ಪ್ರಾಣಿ.

ಪದ್ಮನಾಭ : ಆ ಪ್ರಾಣಿಯೇ ಕೆಟ್ಟ ಪ್ರಾಣಿ! ಇರುವದೊಬ್ಬರದು, ಹೇಳುವದೊಬ್ಬರದು! ಈಗಲಾದರೂ ಹೇಳಿರಿ. ನೀವು ಆ ಹೆಣ್ಣು ಮಗಳನ್ನು ಮುಳುಗಿಸಲಿಲ್ಲವೇ ?

ವಿಶ್ವಾಸರಾಯ: ಶಿವ ಶಿವ, ನೀವೂ ನಂಬುತ್ತೀರಾ, ಆ ಮಾತು? ನಮ್ಮ ಕೆಲಸವೆಂದರೆ ಮೊದಲೇ ಕೆಟ್ಟ ಕೆಲಸ, ಇಲ್ಲದ ಸಲ್ಲದ, ಆರೋಪ ಅಪವಾದಗಳು ಬರುವವು. ತಮ್ಮಂಥ ನ್ಯಾಯಾಧೀಶರು ಆಕೆಯನ್ನು ಹಿತ್ತಲದಲ್ಲಿಟ್ಟುಕೊಂಡು..........

ಪದ್ಮನಾಭ : ಹರಿ ಹರಿ, ಏನು ಹೊಲಸು ಮಾತು! ಬಿಟ್ಟು ಬಿಡಿರಿ, ಸ್ವರ್ಗದಲ್ಲಿ ಕುಳಿತು ನರಕದ ವಾಸನೆಯೇಕೆ ನೋಡಬೇಕು? ಗ್ರಹಾಚಾರ ತಪ್ಪಿದ್ದಕ್ಕೆ, ಏನೋ ಅಪವಾದದ ಗಾಳಿಸೋಂಕಿ ಹೋಯಿತು. ಒಳಗಿನ ಯೋಗ್ಯತೆ ಬಲ್ಲ ಸರ್ವಸಾಕ್ಷಿ ಶ್ರೀಮನ್ನಾರಾಯಣನೇ ಕಾಯ್ದ.

ವಿಶ್ವಾಸ : ಹಾಗಾದರೆ ಈಗೇನು ತಾವು ಈ ಊರಿನಲ್ಲೇ ಇದ್ದೀರಾ? ತಮ್ಮನ್ನು ನೋಡಿ ಬಹಳ ದಿವಸಗಳೇಕೆ, ವರುಷಗಳಾಗಿದ್ದವು. ಬಹಳ ಸಂತೋಷವಾಯಿತು.

ಪದ್ಮನಾಭ : ತಾವು ಬಂದದ್ದೇಕೆ ಈ ಊರಿಗೆ, ವಿಶ್ವಾಸರಾವ್ ?

ವಿಶ್ವಾಸ : ಆ ಹಳೆಯ ಹೆಸರು, ಹಳೆಯ ಕಥೆ, ಹಳೆಯ ಕೆಲಸ, ಎಲ್ಲ ಮರೆತು ಬಿಡೋಣ ಎಂದು ಹೇಳಿದಿರಲ್ಲ, ನೆಟ್ಟಗಿರಬೇಕಾದದ್ದು

ಒಂದು ಶೀಲ! ಶೀಲವೊಂದು ನೆಟ್ಟಗಿದ್ದರೆ, ಎಲ್ಲವೂ ಸರಿಯೇ! ಅಂಥ ಚಾಕರಿಯನ್ನು ಮಾಡಿಯೂ ಈಗ ನಾನು, ಈ ಹಾದಿಯಲ್ಲಿದ್ದದ್ದು, ಕೇವಲ ಶೀಲದ ಬಲ ನೋಡಿರಿ, ಪದ್ಮನಾಭರಾಯರೇ!

ಪದ್ಮನಾಭ : ಪದ್ಮನಾಭರಾಯರೇ ಎನ್ನಿರಿ, ಹರಿದಾಸರೇ ಎನ್ನಿರಿ-ನಡೆಯಲಿ. ಈಗ ನಾನಂತೂ ಭಕ್ತಿಸೂತ್ರ, ಭಗವದ್ಗೀತೆ, ಭಾಗವತ ಇದರ ಪಾರಯಣವನ್ನೇ ನಡೆಸಿದ್ದೇನೆ.

ವಿಶ್ವಾಸ : ನನ್ನದೇನೆಂದು ಕೇಳಿದಿರಿ. ಬ್ರಹ್ಮಸೂತ್ರ, ಯೋಗವಾಸಿಷ್ಠ, ರಾಮಾಯಣ. ಇಷ್ಟೇ ಅಲ್ಲ; ಊರು, ಮನೆ, ಮಾರು ಎಲ್ಲ ಬಿಟ್ಟು ಹೆಸರು ಕೂಡ ಹೇಳಿಕೊಳ್ಳದೆ, ದೇಶಾಂತರ ಮಾಡುತ್ತಿದ್ದೇನೆ. ತಮ್ಮದಿನ್ನೂ ಭಕ್ತಿಮಾರ್ಗ ಹಾಗಾದರೆ?

ಪದ್ಮನಾಭ : 'ಮದ್ಭಕ್ತಃ ನ ಪ್ರಣಶ್ಯತಿ' ಇದೇ ನಮ್ಮ ಹಾದಿ.

ವಿಶ್ವಾಸ : 'ಆದರೆ ಜ್ಞಾನೇ ಖಲು ಪರಿಸಮಾಪ್ಯತೆ' ಎಂಬುದು ಕೊನೆಗಿದ್ದೇ ಇದೆ.

ಪದ್ಮನಾಭ : ಆ ಪರಿಸಮಾಪ್ತಿಯ ನಂತರದಲ್ಲಿಯೇ ಪರಾಭಕ್ತಿಗೆ ಪ್ರಾರಂಭವೆಂಬುವದು. ಎಲ್ಲ ಮುಕ್ತಿಯೋಗ್ಯ ಜೀವರಿಗೆ ಗೊತ್ತೇ ಇದೆ, ವಿಶ್ವಾಸರಾಯರೇ!

(ಇದೇ ಹೊತ್ತಿಗೆ ಹಿಂದೆ ವರ್ಣಿಸಿದ ಸುಂದರಾಬಾಯಿ ಅಕಸ್ಮಾತ್ತಾಗಿ ಅದೇ ಹಾದಿಯಿಂದ ಬರುತ್ತಾಳೆ. ರೂಪ ಹೇಗೇ ಇದ್ದರೂ ರೀತಿ ಓರಣದ್ದಾಗಿದೆ. ಮುಪ್ಪಿನ ಕಳೆ ಮುಖಕ್ಕಡರಿದೆ, ಆದರೂ ಶಕ್ತಿಯಿದ್ದ ಲಕ್ಷಣಗಳಿವೆ)

ಸುಂದರಾ : (ಸ್ವಗತ) ಓಹೋ ವಿಶ್ವಾಸರಾಯರೇ, ಇವರಾರಿವರು? ಪದ್ಮನಾಭರಾಯರು. ಬರಬರುತ್ತ ಹಳೆಯ ಪ್ರಾಯ ಹೊಸದಾಗಿ ಬರುತ್ತಾ ಇದೆಯಲ್ಲ ಇವರಿಗೆ! ಮುಗುಳುನಗೆ ನಗುತ್ತಾ

ಇದ್ದಾರೆ. (ಪ್ರಕಟ) ಯಾಕೆ ಪದ್ಮನಾಭರಾಯರೇ! ಗುರುತು ಮರೆತಿರಾ ?

ಪದ್ಮನಾಭ : (ಸ್ವಗತ) ಇನ್ನು ಸುಮ್ಮನೆ ಕುಳಿತರೆ ಮೈಮೇಲೆ ಬಂದೀತು. (ಪ್ರಕಟ) ನಮಗೇನೋ ಗುರುತು ಇದ್ದೇ ಇದೆ. ತಾವೇ ಹೊಸ ಹೊಸ ಮೋರೆ ನೋಡುತ್ತಾ.........

ಸುಂದರಾ : ಅದೇ ಅಂದೆನಲ್ಲ, ರಾಯರಿಗೆ ಪ್ರಾಯ ಹೋಗಿಲ್ಲ ಎಂದು. ಚೇಷ್ಟೇ ಮಾಡಿಸಿಕೊಳ್ಳುವ ವಯಸ್ಸೇ ನನ್ನದು ? ಯಾಕೆ ವಿಶ್ವಾಸರಾಯರೇ, ಹೌದೋ ಅಲ್ಲವೋ ?

ಪದ್ಮನಾಭ : ಅವರ ಸಾಕ್ಷಿಯನ್ನೇಕೆ ಕೇಳುತ್ತೀರಿ ? ನಿಮ್ಮ ಸ್ವರೂಪ ವರ್ಣನೆಯನ್ನು ಆಗಳೇ, ಡೊಳ್ಳು ಹೊಟ್ಟೆ, ಗುಳ್ಳಗಣ್ಣು, ಪೊಳ್ಳುಮೈ ಎಂದು ಕೈಯಾಡಿಸಿ ನೋಡಿದವರಂತೆ ಮಾಡಿದರು.

ಸುಂದರಾ : ಹಳೆಯ ಗೆಣೆಯರು ಕೂಡಿ, ಹಳೆಯ ಮಾತು ನಡೆಸಿದ್ದಿರಿ ಹಾಗಾದರೆ? ನನ್ನ ಹೆಸರೂ ಸುಂದರಾ ಎಂದಿರದಿದ್ದರೆ, ನನ್ನನ್ನೂ ಮರೆತುಬಿಡುತಿದ್ದಿರೊ ಏನೋ !

ವಿಶ್ವಾಸ : ಏನೋ ಯಾಕೆ ? ಆಗಳೇ ಪದ್ಮನಾಭರಾಯರು ತಮಗೆ ನಿಮ್ಮ ಗುರುತೇ ಇಲ್ಲ ಎಂದು ಅಂದಿದ್ದರು.

ಸುಂದರಾ : ಸರಿ, ಬೇರೆ ಮೋರೆಯ ಗುರುತು ಆಮೇಲಾಗಿದ್ದರೆ; ಹಳೆಯ ಗುರುತು ಹೇಗುಳಿದೀತು ? ಹೌದೋ ಅಲ್ಲವೋ ? ಅವರ ಮಾತು ಅವರಿಗೊಪ್ಪಿಸಿದೆ, ವಿಶ್ವಾಸರಾಯರೇ !

ಪದ್ಮನಾಭ : ಸುಂದರಾಬಾಯಿ, ಏನೇನೋ ಮಾತು ಮಾತಾಡಿ ಜನರಿಗೆ ಸಂಶಯ ಬರುವಂತೆ ಮಾಡಬೇಡಿರಿ.

ವಿಶ್ವಾಸ : ಛೀ, ನನಗೆ ಸಂಶಯ ಬಂದಿಲ್ಲ. ನನಗೆ ನಿಶ್ಚಯವಿದೆ.

ಪದ್ಮನಾಭ : ಏನು, ಸುಳ್ಳು ಸುಳ್ಳೇ ಹೇಳಿದರೆ?

ಸುಂದರಾ : ಇಗೋ ನೋಡಿರಿ, ಜನ್ಮ ಮುಗಿಯುವ ಕಾಲ ಬಂತು. ಜನರಿದಿರಿಲ್ಲದಿದ್ದರೂ ಮನದಿದಿರಾದರೂ ನಿಜವನ್ನು ಒಪ್ಪಿಕೊಳ್ಳೋಣ. ನಾವು ಮೂವರು ಕೂಡಿದಾಗ, ಮಂದಿ ಯಾರೂ ಇದ್ದಂತಾಗಲಿಲ್ಲ. ಮನಃಸಾಕ್ಷಿ ಮಾತನಾಡಿ, ದೇವರಿಗೆ ಅದನ್ನೇ ಅರಿಕೆ ಮಾಡಿಕೊಳ್ಳೋಣ. ಏನೋ ತಪ್ಪು ಹಾದಿಯಲ್ಲಿ ತಪ್ಪಡಿ ಇಟ್ಟದ್ದಾಗಿತ್ತು, ಜ್ಞಾನದಲ್ಲಿಯೂ ಅರೆಮರವು ಬೇಡ. ಯಾಕೆ ವಿಶ್ವಾಸರಾಯರೇ?

ಪದ್ಮನಾಭ : ಹಾಗಾದರೆ, ಈ ವಿಶ್ವಾಸರಾಯರೂ ನಿಮ್ಮ ವಿಶ್ವಾಸದ ಒಳಸಂಚಿನಲ್ಲಿಯೇ ಇದ್ದರು, ಸುಂದರಾಬಾಯಿ?

ಸುಂದರಾ : ಅನೇಕ ಜನರಿದ್ದರು; ಅವರೇ ಏಕೆ? ನಾನು ಮೊನ್ನೆ ದೀಕ್ಷೆ ತಕ್ಕೊಂಡ ಕಾಲಕ್ಕೆ, ಗುರುವಿನಿದಿರು ಎಲ್ಲ ರಘಳರಘಳ ಒಪ್ಪಿಕೊಂಡು ಬಿಟ್ಟೆ.

ಪದ್ಮನಾಭ : ಅಲ್ಲ! ಯಾವೂರಲ್ಲಿ ಇದಾದದ್ದು, ಸುಂದರಾಬಾಯಿ?

ವಿಶ್ವಾಸ : ಇಲ್ಲ, ಸ್ವಚ್ಛ ನಮ್ಮ ಹೆಸರನ್ನೂ ಹೇಳಿದಂತಾಯಿತೋ?

ಸುಂದರಾ : ಎಲ್ಲ ಎಲ್ಲ, ಪುಟ್ಟ ಪೂರಾ! ಮಲ ತೊಳೆದುಕೊಂಡು ನಿರ್ಮಲರಾಗುವ ಹೊತ್ತಿನಲ್ಲಿ, ಅಡಗಿಸಿಟ್ಟು ಏನು ಉಪಯೋಗ?

ಪದ್ಮನಾಭ : ಯಾವ ಊರಿನಲ್ಲಿ ಅಂದೆ.

ಸುಂದರಾ : ಪಂಢರಪುರ.

ಪದ್ಮನಾಭ : ಏನು ಒಳ್ಳೇ ಕ್ಷೇತ್ರದಲ್ಲಿ ಹೇಳಿಟ್ಟೀ......ಆ ಗುರುವಿನ ಫೋಟೋ ಆದರೂ ಇದೆಯೇನು? ಆ ಗುರುವೇನೋ

ನಿಜವಾಗಿ ಗುರುವೋ? ಹಾಗೇ ಗುರುಗುರುವೋ?

ಸುಂದರಾ : ಮನಸ್ಸಿನಂತೆ ಮಾತು! ಆಡಿಕೊಳ್ಳಿರಿ. ಬಹಳ ದೂರ ನಡೆದು ಬಂದೆ, ಮೈಯಲ್ಲಿ ಚೆನ್ನಾಗಿಲ್ಲ; ಹೋಗುತ್ತೇನೆ. ಏನೋ ಭೆಟ್ಟಿಯಾದಿರಿ; ಏನೋ ಮಾತು ಹೊರಟವು; ಏನೋ ಆಡಿದೆ. ನಿಮಗೂ ದೇವರು ಒಳ್ಳೇ ಬುದ್ಧಿಯನ್ನು ಕೊಡಲಿ. ಬರುತ್ತೇನೆ, ನಮಸ್ಕಾರ.

ವಿಶ್ವಾಸರಾವ : ನಾನು ಆ ಹಳೆಯ ಹೆಸರನ್ನು ಎಂದೋ ಬಿಟ್ಟಿದ್ದೇನೆ. ನಿಮಗೆ ಗೊತ್ತಿರಲಿಕ್ಕಿಲ್ಲ, ಸುಂದರಾಬಾಯಿ.

ಸುಂದರಾ : ನಾನು ತಮ್ಮ ಹೆಸರು ಹೇಳಿದ್ದು, ಪೋಲೀಸು, ಕೋರ್ಟಿನಲ್ಲಲ್ಲ; ಗುರುವಿನ ಪಾದದಲ್ಲಿ.

ಪದ್ಮನಾಭ : ಅಲ್ಲ ಸುಂದರಾಬಾಯಿ! ನಮ್ಮ ಫೋಟೋಗೀಟೋನು ಆ ಗುರುವಿಗೆ ಕೊಟ್ಟಿರುವಿಯೇನು?

ಸುಂದರಾ : ಅವನ್ನೆಂದೋ ಸುಟ್ಟು ಹಾಕಿದೆ. ಬರುತ್ತೇನೆ, ನಮಸ್ಕಾರ! (ಹೊರಟು ಹೋಗುವಳು)

ಇಬ್ಬರೂ : (ಅವಳು ಹೋದ ಹಾದಿಯ ಕಡೆಗೆ ನೋಡುತ್ತಾ) ಏನು ನಾಚಿಕೆಗೆಟ್ಟ ಹೆಂಗಸಿವಳು!

ಪದ್ಮನಾಭ : ಅಲ್ಲ! ನರಕದಲ್ಲಿ ಬೀಳುವಾಗ್ಗೆ, ಬೀಳಬಾರದೆಂದು ಕೈಕೊಟ್ಟವರಿಗೂ ಕೈ ಹಿಡಿದು ಜಗ್ಗುತ್ತಾಳೆ.

ವಿಶ್ವಾಸರಾವ : ಅದೇ ಅನ್ನುತ್ತೇನೆ. ಕಬೂಲಿ ಜವಾಬು ಎಂದರೇನು? ಗುರುದೇವನೇನು ಯಮದೇವನೋ!

ಪದ್ಮನಾಭ : ಹೋಗಲಿ ಬಿಡಿರಿ, ನಾಚಿಕೆಗೆಟ್ಟ ಹೆಂಗಸು! ಅವಳ ಪಾಪ ಅವಳಿಗೆ! ಮಾಯಾತೀತರೇ, ಈಗೇನು ಅಭ್ಯಾಸ ನಡೆಸಿದ್ದೀರಿ ಅಂತೂ.

ವಿಶ್ವಾಸರಾವ : ಸೌಂದರ್ಯಲಹರಿ ಓದುತ್ತೇನೆ. ತಾವು ?

ಪದ್ಮನಾಭ : ಗೋಪೀಗೀತ ! ಆದರೂ ನಾಚಿಕೆಗೆಟ್ಟ ಹೆಂಗಸು.

ವಿಶ್ವಾಸರಾವ : ಇರಲಿ ಬಿಡಿರಿ, ಏನೆಂದರೂ ಹೆಂಗಸು !

(ತೆರೆ ಬೀಳುತ್ತಿರುವಾಗ ಗೆಣೆತನಾ ಹಾಡು ಪೂರ್ತಿಯಾಗಿ ಹಾಡಲಾಗುವದು)

ಸಂಪಾದಕರ ನುಡಿ

ಗೆಳೆಯ ಎಂಬ ಶಬ್ದ ಸ್ನೇಹದ ಪ್ರತೀಕ. ಗೆಣೆಯ ಎಂಬ ಶಬ್ದ ಶೃಂಗಾರದ ಪ್ರತೀಕ. ''ತ್ರಿಗುಣೋದ್ಭವಮತ್ರ ಲೋಕ ಚರಿತಂ ನಾನಾರಸಂ ದೃಶ್ಯತೇ'' ಎಂಬುದು ಮಹಾಕವಿ ಕಾಳಿದಾಸನ ಉಕ್ತಿ. ಸತ್ತ್ವ, ರಜ, ತಮ - ಇವು ಮೂರು ಗುಣಗಳು-ಸ್ವಭಾವಗಳು. ರಜೋಗುಣ, ತಮೋಗುಣ ಮೀರಿ ಸಾತ್ವಿಕರಾಗಬೇಕು ಎಂಬುದು ಪ್ರಾಚೀನ ಬೋಧನೆಯ ಸಾರ. ಈ ಹಿನ್ನೆಲೆಯಲ್ಲಿ ಬೇಂದ್ರೆಯವರು ''ಹಳೆಯ ಗೆಣೆಯರು'' ಏಕಾಂಕ-ಸುಖಾಂತ-ಸುಕುಮಾರ ಪ್ರಯೋಗದ ಹುಚ್ಚಾಟದಲ್ಲಿ ಮೂರೇ ಪಾತ್ರಗಳ ಆಯ್ಕೆ ಮಾಡಿದರು.

ಪದ್ಮನಾಭರಾಯ ಮತ್ತು ವಿಶ್ವಾಸರಾಯರು ನ್ಯಾಯಾಧಿಕಾರಿ ಮತ್ತು ಪೋಲೀಸ್ ಅಧಿಕಾರಿಯಾಗಿ ಸಾಮಾಜಿಕ ಅನ್ಯಾಯಗಳನ್ನು ತಡೆಹಿಡಿಯುವ ಕೆಲಸ ಮಾಡಿದವರು. ಸುಂದರಾಬಾಯಿ ನರ್ಸ ಆಗಿ ಜನರ ಆರೋಗ್ಯಕ್ಕೆ ನ್ಯಾಯ ಸಲ್ಲಿಸಿದವಳು. ಈ ಮೂವರೂ ಕಾಮಕ್ಕೆ ಬಲಿಯಾಗಿ ಅನ್ಯಾಯ ಮಾಡಿದ್ದು ಹುಚ್ಚಾಟ. ಅದನ್ನು ಅಧಿಕಾರ ಮತ್ತು ಸಾಮಾಜಿಕ ಪ್ರತಿಷ್ಠೆಯ ವಾಚಿಕ, ಆಂಗಿಕ, ಮತ್ತು ಆಹಾರ್ಯ ಅಭಿನಯದಿಂದ ಮುಚ್ಚಿ ಬಿಟ್ಟದ್ದು ಎರಡನೆಯ ಹುಚ್ಚಾಟ.

ನರ್ಸಳ ಹೃದಯ ಪರಿಯವರ್ತನೆಯಾಗಿ ಅವಳು ಸಾತ್ವಿಕಳಾಗಿದ್ದಾಳೆ. ಆದರೆ ಅವಳನ್ನು ಕುರಿತು ''ಆದರೂ ನಾಚಿಕೆಗೆಟ್ಟ ಹೆಂಗಸು'' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದು ಮಹಾಹುಚ್ಚಾಟ. ಪದ್ಮನಾಭರಾಯ ಮತ್ತು ವಿಶ್ವಾಸರಾಯರು - ಹರಿದಾಸ ಮತ್ತು ಮಾಯಾತೀತ ಎಂಬ ನಾಮಾಂತರದ ಮುಖವಾಡ ತೊಟ್ಟು, ಸಾತ್ವಿಕರಂತೆ ನಟಿಸುವ ಬುದ್ಧಿಯುಳ್ಳವರಾಗಿದ್ದಾರೆ. ಆದರೆ ತಮೋಗುಣದಿಂದ ಅವರು ನಿವೃತ್ತರಾಗಿಲ್ಲ. ಇಬ್ಬರ ಹೃದಯ ಪರಿವರ್ತನೆ ಆಗಿಲ್ಲ. ಹೃದಯ ಪರಿವರ್ತನೆಯಾಗದೇ, ಆಗಿದೆ ಎಂಬಂತೆ ನಟನೆಯಾಡುವರು - ಹರಿದಾಸ ಮತ್ತು ಮಾಯಾತೀತ. ''ಅಭಿನಯದಿಂದ ತಮ್ಮ ಅವಸ್ಥೆಯನ್ನು ರಸೋಚಿತವಾಗಿ ಅನುಕರಣ ಮಾಡುವುದೇ ನಾಟ್ಯ'' ಎಂದು ಲಾಕ್ಷಣಿಕರು ಹೇಳಿದ್ದಾರೆ. ಭಾವ ಮತ್ತು ಅಭಿನಯಗಳಿಂದ ಕೂಡಿದ ಸ್ಥಾಯಿಭಾವಗಳನ್ನು ಮನಸ್ಸಿನಲ್ಲಿ ಅನುಭವಿಸುತ್ತ

ಸುಖಪಡುತ್ತಿವೆ ಇಲ್ಲಿಯ ಪುರುಷ ಪಾತ್ರಗಳು. ಇವರಿಬ್ಬರ ಸ್ಥಾಯಿಭಾವ-ಕಾಮು-ಶೃಂಗಾರ. ಅದನ್ನೇ ಮನಸ್ಸಿನಲ್ಲಿ ಅನುಭವಿಸುತ್ತ, ವೇಷಾಂತರದಿಂದ ಸಮಾಜಕ್ಕೆ ಮೋಸ ಮಾಡುತ್ತಿದ್ದಾರೆ. ಇಂಥವರ ಹುಚ್ಚಾಟವನ್ನು ಬಯಲಿಗೆಳೆಯವುದೇ ಬೇಂದ್ರೆಯವರು ಸೃಷ್ಟಿಸಿದ ಈ ಪ್ರಹಸನದ ಉದ್ದೇಶ. ಸುಂದರಾಬಾಯಿಯ ಪಾತ್ರ ಪರಿಪಕ್ವಪಾತ್ರ. ಪದ್ಮಭಾಭರಾಯರು ಮತ್ತು ವಿಶ್ವಾಸರಾಯರು-ಪರಿಪಕ್ವರಾಗಿರುವಂತೆ ನಟಿಸುತ್ತಿದ್ದಾರೆ. ನಟನೆ ಮತ್ತು ಸತ್ಯ ಇವುಗಳ ಮೌಲ್ಯ ಈ ದೃಶ್ಯ ಪ್ರಯೋಗದಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಂಡಿದೆ. ಯುಕ್ತ ನಡತೆ=ಪಾತ್ರ. ಅಯುಕ್ತ=ಅಯೋಗ್ಯ ನಡತೆ =ಅಪಾತ್ರ. ಇಲ್ಲಿಯ ಪುರುಷಪಾತ್ರ ಒಂದರ್ಥದಲ್ಲಿ ಅಪಾತ್ರ. ಶುದ್ಧ ಚಾರಿತ್ರ್ಯ ಪರಿವರ್ತನೆಗೊಂಡ ಸ್ತ್ರೀ ಒಬ್ಬಳೇ ಪವಿತ್ರ ಪಾತ್ರ. ಪಾತ್ರತೆ ಮತ್ತು ಅಪಾತ್ರತೆಗಳ ಸಂಯೋಗ ಹಾಗೂ ತಾಕಲಾಟಗಳ ಚಿತ್ರಣ ಇಲ್ಲಿದೆ.

- ಸಂ.

''ಹಳೆಯ ಗೆಣೆಯರು'' ಕುರಿತು ರಸಸಮೀಕ್ಷೆ

''ಹಳೆಯ ಗೆಣೆಯರು'' Comedy of Menace ಪ್ರಕಾರಕ್ಕೆಯೆ ಸೇರಿದುದು. ಈ ನಾಟಕದ ನೈತಿಕತೆ ಪಾರದರ್ಶಕವಾಗಿದೆ''.

- ಡಾ|| ಜಿ. ಎಸ್. ಆಮೂರ

ಬಹಳ ವರ್ಷಗಳಾದ ಮೇಲೆ ಇಬ್ಬರು ''ಹಳೆಯ ಗೆಣೆಯರು'' ಆಕಸ್ಮಿಕವಾಗಿ ಭೆಟ್ಟಿಯಾಗಿ ಹಳೆಯ ಕತೆಯನ್ನು ಬಿಚ್ಚುತ್ತಾರೆ. ಅವರೀಗ ವೇದಾಂತದ ಮಾರ್ಗ ಹಿಡಿದವರು. ಒಬ್ಬ ವೇದಾಂತಿ; ಇನ್ನೊಬ್ಬ ಭಕ್ತ. ಆದರೆ ಒಳಗೆ ಜೀವ ಮಾಗಿಲ್ಲ. ವೇಷದ ಹಿಂದಿನ ವ್ಯಕ್ತಿತ್ವ ಇನ್ನೂ ಹಳೆಯದೇ, ಅವರ ವಿವಾಹ-ಬಾಹಿರ ಸ್ನೇಹದ ವಸ್ತುವಾಗಿದ್ದವಳು ಅವರಿಗೆ ಭೆಟ್ಟಿಯಾಗಿ ತನ್ನ ಬಾಳಿನ ಪರಿಣಾಮವನ್ನು ಅವರ ಮುಂದಿಡುತ್ತಾಳೆ. ತನ್ನ ಹಳೆಯ ಮಾಲಿನ್ಯವನ್ನು ಕಳೆದುಕೊಂಡು ನಿರ್ಮಲವಾಗಿದ್ದಾಳೆ. ಆದರೆ, ಗೆಣೆಯರಿಗೆ ಅದು ಅರ್ಥವಾಗುವದಿಲ್ಲ. ಕಣ್ಣುಮುಚ್ಚಿಕೊಂಡು ಹಾಲು ಕುಡಿಯುವ ಈ ಬೆಕ್ಕುಗಳಿಗೆ ಜಗತ್ತೂ ಇಲ್ಲ, ಪರಮಾರ್ಥವೂ ಇಲ್ಲ. ನಾಟಕದ ಪ್ರಮುಖವಾದ ಪ್ರತೀಕವೆಂದರೆ ವೇಷ. ವೇಷಕ್ಕೆ ಇರುವ ಸಾಮಾಜಿಕ ಅರ್ಥವನ್ನು ಈ ನಾಟಕ ಉಪಯೋಗಿಸುತ್ತದೆ.

- ಪ್ರೊ. ಕೀರ್ತಿನಾಥ ಕುರ್ತಕೋಟಿ

''ಹಳೆಯ ಗೆಣೆಯರು'' ಏಕಾಂಕದಲ್ಲಿ ಭಾಷಾ ಕೌಶಲವೇ ಅತ್ಯಂತ ಪ್ರಮುಖವಾಗಿದೆ. ಕಾವ್ಯಪ್ರಕಾರದಲ್ಲಿ ಪದಬಳಕೆಯ ಗಾರುಡಿಗರಾದ ಬೇಂದ್ರೆಯವರು ನಾಟಕದಲ್ಲೂ ಅಂಥದೇ ಭಾಷೆಯನ್ನು ಕಟ್ಟಿಕೊಡುತ್ತಾರೆ. ಒಂದು ಪದದ ವಿಭಿನ್ನ ಅರ್ಥ ನೀಡುವುದಕ್ಕೆ ನಾಟಕದ ಶೀರ್ಷಿಕೆಯಲ್ಲಿ ಕಂಡು ಬರುವ 'ಗೆಣೆಯರು' ಎಂಬುದು ಅತ್ಯಂತ ಸಮರ್ಥಕ ಉದಾಹರಣೆಯಾಗಿದೆ.

- ಡಾ|| ವನಜಾಕ್ಷಿ ಆರ್. ಹಳ್ಳಿಯವರ

ಬಾಯಿಮಾತು - ಬರಹದ ಮಾತು
(ಧಾರವಾಡದ ಕಡೆಯ ಮಾತಿನ ರೀತಿ)

- ದ. ರಾ. ಬೇಂದ್ರೆ

ಒಂದೇಮಾತಿನವರೆ, ಮಾತಿನ ಉಲಿತ, ಒಲೆತ; ರಂಗು-ಢಂಗು, ರಾಗ-ಧಾಟಿ; ಬೇರೆಯಾಗುತ್ತಲೆ, ಬೇರೆ ಬೇರೆಯವರೇನೋ ಎಂಬಂತೆ ಒಡೆದುಕೊಂಡುಬಿಡುತ್ತಾರೆ. ಆ ಗಂಡಾಂತರದಿಂದ ಪಾರಾಗುವದು ಇಂದು ಅವಶ್ಯವಾಗಿದೆ. ಮಾತಿನಲ್ಲಿ ಮಾರ್ಗ ಎಂದರೆ - ಸರಳವಾದ ರಾಜಬೀದಿಯೂ ಉಂಟು. ದೇಶಿ ಎಂದರೆ - ದಿಕ್ಕು ದಿಕ್ಕಿಗೆ ಒಯ್ಯುವ ಅಡ್ಡತಿಡ್ಡ ಕಾಲುಹಾದಿ ಕವಲುಹಾದಿಯೂ ಉಂಟು. ಮಾರ್ಗದಲ್ಲಿಯೆ ಉತ್ತರಮಾರ್ಗ, ದಕ್ಷಿಣಮಾರ್ಗ ಎಂಬುದು ಎಂದಿನಿಂದಲೂ ನಡೆದುಬಂದಿದೆ. ಪಶ್ಚಿಮಘಟ್ಟದ ಯಕ್ಷಗಾನದೊಂದಿಗೆ ಮೂಡಲಪಾಯಾ ಆಟಗಳಿಗೂ ''ಚಾಲತೀ'' ದೊರೆಯುವದುಂಟು. ಹೀಗಾಗಿ ಆದಿಕವಿ ಪಂಪನ ಹಿಂದಿನಿಂದಲೂ, ಕವಿರಾಜಮಾರ್ಗದ ಪೂರ್ವದಿಂದಲೂ, ಬಾಯಿಮಾತಿನ ದೇಶಿಯೂ, ಬರಹದ ಮಾತಿನ ಮಾರ್ಗವೂ ತಮ್ಮ ತಮ್ಮ ಪ್ರತಿಷ್ಠೆಯನ್ನು ಕಾಯ್ದುಕೊಂಡು ಬಂದಿವೆ. ಆದರೆ ಬಲ್ಲವರೂ ಯುಗಪುರುಷರೂ ಆದ ಕವಿಗಳೂ ಸಾಹಿತಿಗಳೂ, ಕಾಲಕಾಲಕ್ಕೆ ಬಾಯಿಮಾತಿಗೂ ಬರಹದ ಮಾತಿಗೂ ಹೊಂದಿಕೆ ಮಾಡುತ್ತಾ ಬಂದಿದ್ದು, ಹಿಂದಿನದನ್ನು ಹಳೆಗನ್ನಡವೆಂದೂ, ಇಂದಿನದನ್ನು ಹೊಸಗನ್ನಡವೆಂದೂ ಕರೆದು, ಮಾತಿನಲ್ಲಿ ಮುಂಬರಿದ್ದಾರೆ. ಆದರೂ, ಪುರಾತನರಿಗೂ ಆದ್ಯತನರಿಗೂ ಒಂದು ಪರಂಪರೆಯ ಜಾಡು ಕಾಣದೆ ಇಲ್ಲ.

ಬಾಯಿಮಾತು ಯಾವಾಗಲೂ ಹರಿಯುವ ನೀರು. ಅದು ಹೊಸ ಹೊಸದಾಗದಿದ್ದರೆ ಮಲೆತುನಾರುವದು. ಪ್ರಕೃತಿಯ ಪ್ರಕಾಶಗಳಲ್ಲಿ ವಿಕೃತಿ ಸೇರಿಕೊಂಡರೆ, ಅದರ ವಿಶೇಷದ ಸಂಸ್ಕಾರಕೊಟ್ಟು ಸುರೂಪಗೊಳಿಸಬೇಕಾಗುತ್ತದೆ. ಈ ವ್ಯಾಪಾರಕ್ಕೆ ಬದುಕು-ಬಾಳ್ವೆ ಮಾಡಬಂದವರು ಬೇಸರಿಯಬಾರದು. ಮಾತು ಮಾತು ತಿಳಿಯದು ಎಂದು ಮನಸ್ಸನ್ನೆ ತೆಗೆದುಬಿಡುವದು; ಮಾನವನ ಉದ್ಧಾರದ ಲಕ್ಷಣವಲ್ಲ. ಅದು ಅಧಃಪಾತದ ಚಿಹ್ನ. ಬಾಯಿಮಾತು ಬದಲಾಗುತ್ತಿದ್ದಂತೆಯೆ ಬರಹದಮಾತೂ, ನವೋನ್ನವ ಕಾಂತಿಯಿಂದ ಬೆಳಗುತ್ತದೆ. ಹೀಗೆಂತಲೆ, ಬೇಕೆಂದು ಬಾಯಿಮಾತನ್ನು ವಿಕಾರಗೊಳಿಸಿ ಬೇರೆ ಪ್ರಕಾರಮಾಡುವ ಅಗತ್ಯವಿಲ್ಲ. ಇಂದಿನ ಪ್ರಪಂಚ ಶತಕಾನುಶತಕದ ಸಮಾಧಿಯದಲ್ಲ; ಕ್ಷಣಕ್ಷಣಕ್ಕೂ ನವೀನವಾಗುವ ಪ್ರಜ್ಞೆಯದು, ಪ್ರತಿಭೆಯದು, ರಮಣೀಯತೆಯದು. ಇಂದಿನ ಕನ್ನಡವು ಅಚ್ಚುಕಟ್ಟಾದ ಹಿಂದಿನ ಕನ್ನಡವಾಗಿ ಉಳಿಯಲಾರದು. ಹಿಂದೆ ಪ್ರಾಕೃತ, ಅಪಭ್ರಂಶ, ಪೈಶಾಚಿಗಳ

ಸಂಕರ-ಸಂಸ್ಕಾರಗಳನ್ನು ಹೊಂದಿದಂತೆ, ಇಂದೆ, ಉರ್ದು, ಇಂಗ್ಲೀಷುಗಳಲ್ಲಿ ಜಳಕಮಾಡಿ, ನಾಳಿನ ಹಿಂದಿಯಲ್ಲಿಯೂ ತಾನೂ ಸರಿ ಸಾಲಿನಲ್ಲಿ ಮುಂದಾಗಿ ಜಗದಪಟ್ಟದಲ್ಲಿ ಆಟವಾಡುವ ಕಾಯಿಯಾಗಿ, ಉಳಿಯುವದೆಂಬ ಆಕಾಂಕ್ಷೆ-ಅಭೀಪ್ಸೆ ಅದಕ್ಕೆ ಬೇಕು. ಹಣ್ಣಾಗಿ ''ಮುಲ್ಲಿ''ಯಾಗಿ ಮೂಲೆಗುಂಪಾಗುವದು ಅದರ ಭವಿತವ್ಯವಲ್ಲ. ಹೈದ್ರಾಬಾದು, ಮದ್ರಾಸು, ಮುಂಬಯಿ, ಮೈಸೂರು, ಕೊಡಗು ಎಂದು ಪಂಚಮುಖವಾಗಿ ಕೂಡಿಕೊಂಡ ಕನ್ನಡವು ತನ್ನ ವೈವಿಧ್ಯವನ್ನು ಕಾಯ್ದುಕೊಂಡೂ ಐಕ್ಯವನ್ನು ಬೆಳೆಸಿಕೊಳ್ಳಬೇಕು.

ಧಾರವಾಡವು ಬಾನುಲಿಯ ಕೇಂದ್ರದಿಂದಲೂ, ಕರ್ನಾಟಕ ವಿಶ್ವವಿದ್ಯಾಲಯದಿಂದಲೂ, ನೂರು ವರುಷಗಳಿಂದ ಸಾಗಿಬಂದ ಸಾಂಸ್ಕೃತಿಕ ಚಟುವಟಿಕೆಗಳಿಂದಲೂ ತನ್ನದೆ ಕಣ್ಣು ಮೂಗುಳ್ಳ ಪಿಂಡವಾಗಿ ಕಟ್ಟಿಕೊಂಡಿದೆ. ಇಲ್ಲಿಯ ಸಾಮಾಜಿಕ ಜೀವನದ ಬೆಳವಣಿಗೆಯಲ್ಲಿ ಪಟ್ಟಣದಂತೆಯೇ ಹಳ್ಳಿಗಳಿಗೂ, ಬೌದ್ಧಿಕರಂತೆ, ಶ್ರಮಿಕಜೀವಿಗಳಿಗೂ, ವಿಶ್ರಾಂತ ಗ್ರಹಸ್ಥರಿಗೂ, ಕಂತ್ರಾಟದಾರರಿಗೂ, ಸ್ತ್ರೀಯರಿಗೂ, ಬಾಲಕರಿಗೂ ದಿನಾಲೂ ಇಂಬಾಗುತ್ತಿರುವ ಕ್ಷೇತ್ರವಿದೆ. ಅಂತೆಯೇ ಇಲ್ಲಿಯ ಭಾಷೆಯು ಮುಟ್ಟಲಮುರಕಿಯಂತೆ ಮುದುಡಿಕೊಂಡಿಲ್ಲ. ಮಡಿವಂತಿಕೆಯಿಂದ ಟಣಪುಣ ಹಾರಾಡುತ್ತಿಲ್ಲ. ಈ ಕನ್ನಡವೂ ಎಲ್ಲ ಕನ್ನಡದೊಡನೆ ಸರಿಬೆರಿಕೆಯಾಗಿ ಸೇರಬೇಕಾಗಿದೆ. ಇದಕ್ಕೆ ಶಬ್ದಕೋಶ ಸಹಾಯ, ವ್ಯಾಕರಣ ನಿರ್ಬಂಧ ಇಂಥ ಉಪಾಯಗಳಿಗಿಂತ, ಜನಸಾಮಾನ್ಯರ ಮಾತನ್ನು ಆಕಾಶವಾಣಿಯಿಂದ ಮತ್ತೆ ಮತ್ತೆ ಪರಿಚಯಮಾಡಿಕೊಡುವದೇ ನಿಜವಾದ ಮಾರ್ಗವಾಗಿದೆ.

ಧಾರವಾಡ ಕನ್ನಡಕ್ಕೆ ಕೊಂಕಣಿ, ಮರಾಠಿಗಳ ಸಂಪರ್ಕವಿರುವಂತೆ ಹವ್ಯಕರ ನೆರೆಹೊರೆಯೂ ಇದೆ. ಇಲ್ಲಿಯ ಭಾಷೆ ರಾಜಭಾಷೆಯ ಮರ್ಯಾದೆಯದಲ್ಲ, ಜನ ಭಾಷೆಯ ಬೀಸುತನದ್ದು. ಬಾಯಿಬಿಗಿಹಿಡಿದು ಮಾತನಾಡಿ ಅದಕ್ಕೆ ಗೊತ್ತಿಲ್ಲ. ಪೇಶ್ವಾ ಮತ್ತು ಹೈದರ-ಟೀಪುಸುಲ್ತಾನರ ಇಬ್ಬದಿಯ ದಾಳಿಗಳ ಹೋರಾಟದಲ್ಲಿ ಬಂದ ಬಂಡುಗಾರಿಕೆಯ ಪುಂಡುತನ ಅದರ ಮಾತಿನಮಲಕಿನಲ್ಲಿ, ಒರಟು ಹಾರಾಟ-ಏರಾಟಗಳಲ್ಲಿ ಕಂಡುಬರುವದು. ಪುಲಿಗೆರಿಯ ಅಂದರೆ, ಬನವಾಸಿ - ಲಕ್ಷ್ಮೇಶ್ವರ ಪ್ರಾಂತದ ನುಡಿಯು ಧಾರವಾಡದ ಬುನಾದಿಗಿದೆ. ಮುಳಗುಂದದ ನಯಸೇನ, ಕೋಳಿವಾಡದ ಕುಮಾರವ್ಯಾಸ, ಕರ್ಜಗಿಯದಾಸರು, ಸರ್ವಜ್ಞ, ಶರೀಫಸಾಹೇಬ ಇವರೇ ಮೊದಲಾದವರು ಇದನ್ನು ಬೆಳೆಸಿಕೊಂಡು ಬಂದರು. ಗಳಗನಾಥ, ಆಲೂರು, ಮುದವೀಡು ಕೃಷ್ಣರಾಯರು, ತೂರಮರಿ, ಹೊಸ್ನಾಪುರಮಠ, ಶಾಂತಕವಿ, ನಾರಾಯಣರಾವ ಹುಯಿಲಗೋಳ, ಗರುಡ ಸದಾಶಿವರಾವ ಈ ಕವಿಗಳು, ವಾಗ್ಮಿಗಳು, ನಾಟಕಕಾರರು ಅದರ ಅಚ್ಚುಕಟ್ಟು ಉಳಿಸಿದ್ದಾರೆ. ಹೊಸದನ್ನೂ ಗಳಿಸಿದ್ದಾರೆ. ಧಾರವಾಡ ಕನ್ನಡವು ಉಳಿದೆಲ್ಲ ಕರ್ನಾಟಕಕ್ಕೂ ಈಗಾಗಲೇ ಪರಿಚಿತವಾಗಿದೆ ಎಂದೇ ಹೇಳಬಹುದು.

ಆದರೂ ಅದರ ಕೆಲ ವೈಲಕ್ಷಣಗಳನ್ನು, ಬಾಯಿಮಾತಿನ ದೃಷ್ಟಿಯಿಂದ ಎಂದು ಎತ್ತಿಹೇಳಬಹುದು. ಸರ್ವನಾಮಗಳ ಕೊನೆಯ ಅಕ್ಷರಲೋಪ ಸಾಮಾನ್ಯವಾಗಿದೆ. ನಾ, ನೀ, ಅವ, ಇವ, ಆತ, ಈತ! ಸ, ಶ, ಷ ಗಳಲ್ಲಿ ತುಂಬಾ ಅದಲುಬದಲು ಆಗುವದು. ಆಪ್ತಸಂಬಂಧ ವಾಚಕಪದಗಳಲ್ಲಿ ''ಯ''ಕಾರ ಪ್ರಕಾರ ಹೆಚ್ಚು ಯವ್ವ ಯಕ್ಕಾ, ಯಮ್ಮಾ, ಯಜ್ಜಾ, ಯಣ್ಣಾ, ಯತಿಗಿ - ಇದರಂತೆ ಯಾಕ, ಯೇನು, ಯೆಲ್ಲಿ, ಯದಕ, ಯಾವಾಗ, ಯಾವತ್ತೂ, ಈ ಯಕಾರ ಪ್ರಾಬಲ್ಯವೂ ಇದೆ. ಏ ಕಾರವು ಹೇಕಾರದಲ್ಲಿ ಸೇರಿ, ಹ್ಯಾಂಗ, ಹೀಂಗ, ಎಂದೂ ಆಗುವದು. ಮಹಾಪ್ರಾಣಗಳ ಉಚ್ಚಾರವು ಅನೇಕ ಕಾರಣಗಳಿಂದ ರೂಢವಾಗಿದೆ. ತಮಿಳರಿಂದ ಧಾರವಾಡ ಕನ್ನಡ ಬಲು ದೂರ. ಖಂಬ, ಖಟ್ಲೆ, ಖಣ, ಖಂಡೇರಾಯ, ಖೊಬ್ಬರಿ, ಖಾಂಟ, ಖಿಡಿಕಿ, ಖಾರ, ಇಲ್ಲಿ ಕಕಾರ, ಖಕಾರವಾದರೆ, ಛಲೋ, ಛಳಿ, ಛಕಡಿ, ಛೆಂದ, ಛಳಕು, ಛಪ್ಪರ, ಛಾವಣಿ ಇವುಗಳಲ್ಲಿ ಚಕಾರವು ಛಕಾರಕ್ಕೆ ತಿರುಗಿದೆ; ತಂಬಿಗೆ, ಥೆಂಬಿಗೆಯಾಗುವದು, ದೊಡ್ಡಪ್ಪ ಧೊಡ್ಡಪ್ಪನಾಗುವದು, ದೊರೆ ಧೊರಿಯಾಗುವದು, ಬಹಳ ಭಾಳ ಆಗುವದು, ಅಂಥ ಭಾವದಿಂದ ಎಂದು ತೋರುತ್ತದೆ. ಒಂದುಬಗೆಯ ಅರ್ಧಾನುಸ್ವಾರವು ಬಹಳ ಕಡೆಗೆ ಕಂಡುಬರುವದು. ಖಂಟಲಿ, ಬಣಂವಿ, ಬೆಂವುಂಟು, ಶ್ಯಾಂವಿಗಿ, ಯಾಂವ, ಅಂವ, ಅಂದ; ಸಾವಂತಿಗಿ, ಬೇಂವು ಶಬ್ದಗಳ ಮಧ್ಯದ ಸ್ವರವು ಅ, ಇ, ಉ ಏನೂ ಇರಬಹುದೆಂಬಂತೆ ಉಚ್ಚಾರ ಪ್ರವೃತ್ತಿ ಕಂಡುಬರುವದು. ಉಸರು, ಉಸಿರು, ಉಸುರು, ಮಸಕು, ಮಸುಕು, ಮುಸಕು, ಮುಸುಕು, ಬಸರು, ಬಸಿರು, ಬಸುರು. ''ಇ'' ಯ ''ಈ'' ಆಗುವದು ''ಉ'' ಊ ಆಗುವದು. ಸರ್ - ರಾಸು ಹಾರುವರು, ಹಾರೂರು, ಬರೂರು, ಹೋಗೂರು; ಹುಣಚೀಯಮರ - ಹುಣಚೀಮರ, ನಾಯಿಯಕಿವಿ-ನಾಯೀಕಿವಿ, ''ಎ'' ಕಾರಾಂತಗಳು ''ಇ'' ಕಾರಂತಗಳಾಗಿರುವದು ನಿಯಮವೇ ಆಗಿದೆ. ಮನೆ=ಮನಿ, ಸಾಲೆ=ಸಾಲಿ. ತಲೆ=ತಲಿ, ಬೆಲೆ=ಬೆಲಿ, ನೆಲೆ=ನೆಲಿ - ಎಲ್ಲರೂ ಕೇಳಿದ್ದುಂಟು. ''ಒ''ಕಾರ ''ವ''ಕಾರವಾಗಿ ವಳ್ಳು-ವನಿಕೆ, ವಗ್ಗರಣೆ, ವನಪು, ವಲವು ಕೇಳಿಸಿದರೆ, ಕೋಟೆ, ಕ್ವಾಟಿಯಾಗಿ, ತೋಟ, ತ್ವಾಟವಾಗಿ, ತೊಗಟಿ, ತ್ವಾಟಿಯಾಗಿ, ಕೋಣ, ಕ್ವಾಣನಾಗಿ ಬರುವದುಂಟು. ''ರ'' - ಳಕಾರಗಳ, ಕುಸ್ತಿಯಲ್ಲಿ ಅರಳು-ಅಳ್ಳು, ಕೊರಳು-ಕೊಳ್ಳು, ಕರುಳು, ಕಳ್ಳು, ಮುಳ್ಳು, ಹೊಳ್ಳು, ಹುಳ್ಳಿ, ಬಳ್ಳು ಆಗಿಹೋದರೆ; ''ರ''ಕಾರದಿಂದಲೆ, ಕರಡಿ-ಕಡ್ಡಿಯಾಗಿ, ಮರಡಿ-ಮಡ್ಡಿಯಾಗಿ, ಕೊರಡು-ಕೊಡ್ಡವಾಗುವದು; ''ಲ''ಕಾರ ಲೋಪದಿಂದ ಹೋಲುತ್ತಾನೆ, ಹೋತಾನವಾದಂತೆ, ನೂತಾದ, ನಾತಾವು, ಸಾತೀತು, ಆಗುವದುಂಟು. ಬಾಯಿಮಾತಿನ ವಿಭಕ್ತಿ ಪ್ರತ್ಯಯಗಳೇ ಬೇರೆ ಎಂಬಂತೆನಿಸುವದು. ಮನಿ, ಮನಿಗೊಳು, ಮನೀನ್ನ, ಮನಿಗೋಳ್ನ, ಮನೀಂದ, ಮನಿಗೋಳಿಂದ. ಮನೀಗೆ, ಮನೀ, ಮನ್ಯಾಗ, ಮನಿಗೊಳ್ಗಿ.

ನಾ ಬರ್ತೇನು, ನಾವ್‌ಬರ್ತೇವು
ನೀ ಬರ್ತೀ, ನೀವ್ ಬರ್ತೀರಿ
ಅಂವಾ ಬರ್ತಾನು, ಅವ್ರು ಬರ್ತಾರು
ಆಕಿ ಬರ್ತಾಳು, ಅದು ಬರ್ತೈತಿ

ಕ್ರಿಯಾಪದದ ಈ ನಡಿಗೆ ಕಿವಿಗೆ ಒಮ್ಮೆ ರೂಢಿಯಾದರೆ ಆಮೇಲೆ ತೊಡಕು ಉಳಿಯುವದಿಲ್ಲ. ನಮ್ಮಿತ್ತಕಡೆಗೆ, ಓದಲು ಪ್ರಾರಂಭಿಸು, ಓದತೊಡಗು ಎಂಬುದನ್ನೇ ಓದಹತ್ತು ಎನ್ನುತ್ತೇವೆ. ಇದು ಮಹಾರಾಷ್ಟ್ರ - ಉರ್ದು ಪ್ರಭಾವ ಎಂದು ಕೆಲವರು ಹೇಳುತ್ತಾರೆ. ತೊಡಗುವದು ಕೂಡ ಹತ್ತಿಕೊಳ್ಳುವದೇ ಆಗಿದೆ. ಹತ್ತು ಎಂದರೆ ಏರು ಎನ್ನುವ ಅರ್ಥ ಬೇರೆಯೇ ಆಗಿದೆ. ಹೆಸರಾದ, ಇದ್ದಿಲ್ಲ, ಸಿಗು, ಹಂಚಿಕೆ, ಒಮ್ಮೆಲೆ, ಲಗುಬಗೆ, ಬೇನೆ, ಸಾರೆ, ಅಸತ್ತು-ಬೇಸತ್ತು, ಅದೆ. ಐತಿ, ದಂಡೆಗುಂಟ, ಹಿಡಕೊಂಡು, ಪಡಕೊಂಡು, ತನ್ನೊಬ್ಬ ತಮ್ಮನನ್ನು, ಬಗ್ಗೆ ಹೌಹಾರು, ದೊರಕು, ಶರಣುಬರು, ಹುಡುಗಾಟಿಕೆ - ಇಂಥ ಕೆಲವು ಪ್ರಯೋಗಗಳು ಅಶುದ್ಧ ಎನ್ನುವ ಕಾಲವುಇತ್ತು; ಇಂದು ಅವು ರೂಢಿಗೆ ಬಂದಿವೆ.

ಶಾಂತಕವಿಗಳ ವತ್ಸಲಾಹರಣ ನಾಟಕದಲ್ಲಿ - ''ನಿಮ್ಮ ವಚನ ಏನು ಸುಡ್ತದs? ದೊಡ್ಡಸ್ತನs ಏನು ಅಳ್ತದ? ಸೌಭಾಗ್ಯಕ್ಕ ಏನು ಬೆಂಕೀ ಹಚ್ಚತsದ, ಒದರ್‍ಯಾಡಿ ಲಾಭ ಇಲ್ಲ, ಮಾಡೋದುಮಾಡೇ ತೋರಸ್ತೇನಿ? '' ಎಂದು ಅಭಿಮನ್ಯುಕುಮಾರ ಒದರಾಡುತ್ತಾನೆ. ಇದು ರಾಜಕುಮಾರನಿಗೆ ಒಪ್ಪಾಗದಿದ್ದರೂ ನಾಟಕ ನೋಡುವವ್ರಿಗೆ ಅವನ ರಂಭಾಟ ಒಪ್ಪಿಗೆಯಾಗುತ್ತಿತ್ತು. ಅಂದಿನ ನಾಟಕೀಯ ಔಚಿತ್ಯಕ್ಕೂ ಇಂದಿನದಕ್ಕೂ ಅಂತರವುಂಟಾಗಿದೆ. ಧಾರವಾಡ ಪಟ್ಟಣದ ಮಾತು ಬದಲಾಗಿದೆ. ಪಠ್ಯಪುಸ್ತಕಗಳ ಮಾತೂ ಬದಲಾಗಿದೆ. ಅಂತೆಯೇ ಅದರ ಹಳ್ಳಿಪಳ್ಳಿಯ ಮಾತೂ ಬದಲಾಗುತ್ತಿದೆ. ಅದನ್ನು ಕೇಳಿದ ಹಿರಿಯರೂ ಮನೆಯ ಹೆಣ್ಣುಮಕ್ಕಳೂ ತಿಳಿಯದೆ ಬದಲಾಗುತ್ತಿದ್ದಾರೆ.

ಗರತಿಯ ಹಾಡಿನ ಪ್ರಚಾರ, ಜಾನಪದ ಗೀತ, ಕಲ್ಗಿತುರಾಯಿ ಲಾವಣಿ, ಕಥೆ-ಕಾದಂಬರಿ-ನಾಟಕ, ಪತ್ರಿಕೆಗಳೊಳಗಿನ ಪತ್ರವ್ಯವಹಾರ, ಇವುಗಳ ಪರಿಚಯ, ಪ್ರಸಾರಗಳಿಂದ ಧಾರವಾಡದ ವೈಶಿಷ್ಟ್ಯಗಳು ಹೋದ ೩೦, ೪೦ ವರ್ಷಗಳ ಸರಿಬಳಕೆಯಿಂದ ಬಹಳ ಅಪರಿಚಿತವಾಗಿ ಉಳಿದಿಲ್ಲ.

ನಾಣ್ಣುಡಿ, ವಾಕ್ಪ್ರಚಾರ, ಹಳ್ಳಿಯ ಹಾಡುಗಳು ಜನರ ಕಿವಿಗೆ ಹೆಚ್ಚು ಬಿದ್ದಂತೆ ಅದರ ಪರಕೀಯತೆ ಮಾಯವಾದೀತು. ಏನೆಂದರೂ ಬರಹದ ಮಾತೂ ಸಾಹಿತ್ಯದ ಮಾತಾಗಿ, ಹೃದಯದ ಮಾತಾಗಬೇಕಾದರೆ, ಅದಕ್ಕೆ ಬಾಯ್ಮಾತಿನ ಬಣ್ಣಬರಬೇಕಾಗುತ್ತದೆ. ಮುದ್ರಿತವಾದ

ಅಕ್ಷರ ಮೂಕ. ಅದನ್ನು ನುಡಿಸಿತೋರಿಸಲೇಬೇಕು. ಬರಹ ಬಾಯಿಮಾತಿನ ಉಸಿರಿನಿಂದ ಪ್ರಾಣಪ್ರತಿಷ್ಠಾಪನೆ ಹೊಂದುತ್ತದೆ.

''ಮತಾ ಭೇದಮಾಡಿ ಮಥನ ಬೆಳಸತಿರಿ
ತಿಳಿದಿಲ್ಲ ಶಾಸ್ತ್ರದ ಆಧಾರ
ಮಗೀ ಮೊದಲು ಠಾವಕ್ಕಿಲ್ಲ
ಹರಿವಿ ಚಂಚಗಾರ ಹಿಡಿಯವರಾ ಮಾಡಾಕ''

ಈ ಲಾವಣಿಯ ಇಂಥ ಮಾತು ಬರಿ ಬರಹದಿಂದ ಸ್ಪಷ್ಟವಾಗುವುದಿಲ್ಲ. ಆ ಆ ದೇಶದ ನುಡಿದ, ಕುಣಿತ, ಸೊಲ್ಲು ಪರಿಚಯದ್ದಿರಬೇಕಾಗುತ್ತದೆ. ಬರಹದ ಮಾತು ಕಣ್ಣಿಗೆ ಸಾಲಬಹುದು, ಬುದ್ಧಿಗೆ ನಿಲಕಬಹುದು, ಆದರೆ ಬಾಯಿಮಾತು, ಕಿವಿಮಾತಾಗಬೇಕು; ಹೃದಯದ ಮಾತಾಗಬೇಕು.


''ಮಾತು ಮಾತಿಗೆ ತಕ್ಕ। ಮಾತುಕೋಟಿಗಳುಂಟು
ಮಾತಾಡಿಮನಕೆ ಮುನಿಸಕ್ಕು। ಮಾತಿನಲಿ
ಸೋತವನೆ ಜಾಣ ಸರ್ವಜ್ಞ''

ವಿಷ್ಣವೇನಮಃ। ಶಿವಾಯನಮಃ।
ನಮೋ ಬುದ್ಧಾಯ। ನಮೋ ಅಪ್ರಬುದ್ಧಾಯ।
ನಮಃ ಶಾಂತಾಯ। ನಮೋಭ್ರಾಂತಾಯ।
ಭದ್ರಂ, ಶುಭಂ, ಮಂಗಳಂ.


ಬೇಂದ್ರೆ ಸಂಶೋಧನ ಸಂಸ್ಥೆಯ ಪ್ರಕಟಣೆಗಳು







































ಹಳೆಯ ಗೆಣೆಯರು

ಇದು ಪ್ರಹಸನ. 'ಹಳೆಯ ಗೆಣೆಯರು' ಪಂಜರದಲ್ಲಿ ಪಶುಗಳಿಡೆಯಾಡುವಂತೆ ವೇಷಪಲ್ಲಟದ ನಾಟಕ ಮಾಡುತ್ತಾರೆ. ಬುದ್ಧಿಯು ವೇಷ ಮತ್ತು ಭಾಷಾ ಪಲ್ಲಟದಲ್ಲಿ ತೊಡಗಿದಾಗ; ಹೃದಯವು ಭಾವ ಪಲ್ಲಟದತ್ತ ಹೋಗುತ್ತದೆ ಎಂದು ಬೇಂದ್ರೆ ಸೂಚಿಸಿದ್ದಾರೆ. ಈ ಪರಿವರ್ತನೆ ಸುಲಭ ಸಾಧ್ಯವಲ್ಲ. ನೈರ್ಮಲ್ಯದ ಮುಂದಡಿ ಇಡಬೇಕಾದರೆ, ಮುಸುಕಿನ ಆಟ ನಿಲ್ಲಬೇಕು. ಗುಣಪರಿವರ್ತನೆಗೆ ಒತ್ತು ಕೊಡುವ ಈ ಪ್ರಹಸನವು ಆದರ್ಶ ಜೀವನವನ್ನೇ ಬೆಂಬಲಿಸುತ್ತದೆ.

ಆದರ್ಶದ ನುಡಿಯಂತೆ ನಡೆಯಾಗದ ಬದುಕು ನಗೆಗೇಡಾಗುತ್ತದೆ ಎಂಬುದನ್ನು ಮೂರೇ ಪಾತ್ರಗಳಿಂದ ಪರಿಣಾಮಕಾರಿಯಾಗಿ ಕಣ್ಣಮುಂದೆ ನಿಲ್ಲಿಸಿದ್ದಾರೆ ಬೇಂದ್ರೆ. ಇದು ಹುಚ್ಚಾಟವಲ್ಲ. ಜನರಲ್ಲಿ ಭ್ರಮೆ ಹುಟ್ಟಿಸುವ ಪ್ರಹಸನ.

– ಸಂ.

ಡಾ|| ದ.ರಾ.ಬೇಂದ್ರೆ ಸಂಶೋಧನ ಸಂಸ್ಥೆ,
ಹುಬ್ಬಳ್ಳಿ

Dessign:Ravindr